Book No 6

ಶ್ರೀಃ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

★

ಶ್ರೀಮದ್ಭಾಗವತದೊಳಗಣ

ಯಕ್ಷಗಾನ

ಬಿಲ್ಲಹಬ್ಬ ಅಥವಾ ಕಂಸವಧೆ

ಮೂರನೆಯ ಅಚ್ಚು: ೧೯೫೦

ಶ್ರೀಕೃಷ್ಣಮುದ್ರಣಾಲಯ ಉಡುಪಿ

ಐದಾಣೆ 0-6-

P. N. Gopalakrishna Bhat

ಶ್ರೀಃ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

★

ಶ್ರೀಮದ್ಭಾಗವತದೊಳಗಣ

ಯಕ್ಷಗಾನ

ಬಿಲ್ಲಹಬ್ಬ ಅಥವಾ ಕಂಸವಧೆ

★

ಮೂರನೆಯ ಅಚ್ಚು: ೧೯೫೦

ಶ್ರೀಕೃಷ್ಣಮುದ್ರಣಾಲಯ ಉಡುಪಿ

ಐದಾಣೆ

ಅಚ್ಚುಗಾರರು:
ಶ್ರೀಕೃಷ್ಣ ಮುದ್ರಣಾಲಯ
ಉಡುಪಿ

ಪ್ರಕಾಶಕರು:
ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಉಡುಪಿ

ಕಥಾನುಸಾರ

ಪರೀಕ್ಷಿನ್ಮಹಾರಾಜನಿಗೆ ಶುಕಮಹಾಮುನಿಯು ಹೇಳುವನು:— ಶ್ರೀಕೃಷ್ಣನು ಗೋಕುಲದಲ್ಲಿ ಬೆಳೆಯುತ್ತಿರಲು ಇತ್ತ ಮಥುರೆಯಲ್ಲಿ ಒಂದು ದಿನ ಕಂಸನು ತನ್ನ ವೈರಿಯನ್ನು ತಿಳಿದು ಬರಲು ಕಳುಹಿದ್ದ ತನ್ನ ಆಪ್ತರು ಹಿಂದೆ ಬರಲಿಲ್ಲವೆಂದು ಚಿಂತಿಸುವನು. ಅಲ್ಲಿಗೆ ನಾರದನು ಬಂದು ಕಂಸನ ಪೂರ್ವವೃತ್ತಾಂತವನ್ನು ತಿಳಿಸಿ ಬಿಲ್ಲಹಬ್ಬದ ನೆಪದಿಂದ ಬಲರಾಮಕೃಷ್ಣರನ್ನು ಮಥುರೆಗೆ ಕರೆಸಿ ಕೊಲ್ಲುವಂತೆ ಪ್ರೇರೇಪಿಸುವನು. ಕೋಪಗೊಂಡ ಕಂಸನು ವಸುದೇವದೇವಕಿಯರನ್ನು ಸೆರೆಯಲ್ಲಿಟ್ಟು, ಬಿಲ್ಲಹಬ್ಬಕ್ಕೆ ರಾಮಕೃಷ್ಣರನ್ನು ಕರೆತರಲು ಅಕ್ರೂರನನ್ನು ನಂದಗೋಕುಲಕ್ಕೆ ಕಳುಹುವನು. ಅಕ್ರೂರನು ಶ್ರೀಕೃಷ್ಣನ ದರ್ಶನಾಕಾಂಕ್ಷಿಯಾಗಿ ಬಂದು ಕಂಸನ ನಿರೂಪಣೆಯನ್ನು ತಿಳಿಸುವನು. ಕೃಷ್ಣನು ಬಲರಾಮ ಗೆಳೆಯರು ಸಹಿತ ಹೊರಡಲು ಗೋಪಿಯರು ಕೃಷ್ಣನ ವಿಯೋಗಕ್ಕಾಗಿ ಮರುಗುವರು. ಕೃಷ್ಣನು ಅವರನ್ನು ಸಂತವಿಸಿ ಮಥುರೆಗೆ ತೆರಳುವನು. ದಾರಿಯಲ್ಲಿ ಯಮುನಾನದಿಯಲ್ಲಿ ಅಕ್ರೂರನು ಸ್ನಾನಕ್ಕಿಳಿದು ನೀರೊಳಗೆ ಶ್ರೀಹರಿಯ ವಿಶ್ವರೂಪವನ್ನು ಕಂಡು ಸ್ತುತಿಸುವನು. ಮಥುರೆಗೆ ಬಂದು ಕೃಷ್ಣನು ಅಕ್ರೂರನನ್ನು ಅವನ ಮನೆಗೆ ಕಳುಹುವನು. ರಾಜಬೀದಿಯಲ್ಲಿ ಬರುವಾಗ ರಜಕನೊಬ್ಬನು ಮಡಿವಸನಗಳನ್ನು ಕೇಳಿದರೂ ಕೊಡದಿದ್ದುದಕ್ಕಾಗಿ ಕೃಷ್ಣನು ಅವನನ್ನು ಕೊಂದು, ಭಕ್ತಿಯಿಂದ ಎರಡು ಅಂಗಿಗಳನ್ನಿತ್ತ ಚಿಪ್ಪಿಗನೊಬ್ಬನಿಗೆ ಸಾಯುಜ್ಯವನ್ನಿತ್ತು, ತನ್ನನ್ನು ಸತ್ಕರಿಸಿದ ಸುದಾಮನನ್ನು ಅನುಗ್ರಹಿಸಿ, ಕುಬ್ಜೆಯ ಡೊಂಕನ್ನು ತಿದ್ದಿದನು. ಅವನನ್ನು ಕಂಡು ಆಬಾಲವೃದ್ಧರೂ ಆನಂದತುಂದಿಲರಾಗುವರು. ನಾರಿಯರು ಆರತಿಯೆತ್ತುವರು. ಶ್ರೀಕೃಷ್ಣನು ಮಥುರೆಯಲ್ಲಿ ಧನುರ್ಯಾಗಕ್ಕಾಗಿ ಪೂಜಿಸಿಟ್ಟ ಮಹಾಧನುಸ್ಸನ್ನು ಮುರಿದು, ತಡೆದವರನ್ನು ಗೆದ್ದು, ಇದಿರಿಸಿದ ಸೇನೆಯನ್ನು ಸಂಹರಿಸುವನು. ದೂತರಿಂದ ಇದನ್ನು ತಿಳಿದ ಕಂಸನು ಮಹಾಸೇನೆಯನ್ನು ಕಳುಹಲು ರಾಮಕೃಷ್ಣರು ಅದನ್ನು ನಾಶಗೊಳಿಸುವರು. ಅಂದಿನಿರುಳಲ್ಲಿ ಕಂಸನಿಗೆ ದುಃಸ್ವಪ್ನ ಬೀಳುವುದು. ಮರುದಿನ ಕೃಷ್ಣನು ರಂಗಸ್ಥಲದ ದ್ವಾರದಲ್ಲಿ ತನ್ನನ್ನು ತಡೆದ ಕುವಲಯಾಪೀಡವೆಂಬ ಆನೆಯನ್ನು ಕೊಂದುಹಾಕುವನು. ಚಾಣೂರನೆಂಬ ಮಲ್ಲನನ್ನು ಕೃಷ್ಣನೂ,

ಮುಷ್ಟಿಕನೆಂಬವನನ್ನು ಬಲರಾಮನೂ ಕೊಲ್ಲುವರು. ಇತರ ಮಲ್ಲರನ್ನೂ ಕೊಂದ ಮೇಲೆ ಕೃಷ್ಣನು ಕಂಸನನ್ನು ಮಡುಹುವನು. ಅವನ ತಮ್ಮಂದಿರು ಬಲರಾಮನಿಂದ ಸಾಯುವರು. ಆ ಮೇಲೆ ಶೋಕಿಸುವ ಕಂಸನ ಮಡದಿಯರಾದ ಹಸ್ತಿಪ್ರಹಸ್ತಿಯರನ್ನು ಸಮಾಧಾನಗೊಳಿಸಿದ ಬಳಿಕ ಕೃಷ್ಣನು ಸೆರೆಯಲ್ಲಿದ್ದವರನ್ನು ಬಿಡಿಸಿ ಉಗ್ರಸೇನನಿಗೆ ಮಥುರೆಯ ಪಟ್ಟಗಟ್ಟುವನು. ಮಾನಿನಿಯರು ಮಂಗಲಾರತಿಯೆತ್ತುವರು.

ಪಾತ್ರಗಳ ವಿವರ

ಕಂಸ	ಗುಹ
ನಾರದ	ರಜಕ
ವಸುದೇವ	ಚಿಪ್ಪಿಗ
ದೇವಕಿ	ಸುದಾಮ
ಕೇಶಿ	ಕುಬ್ಜೆ
ಅಕ್ರೂರ	ಮಥುರೆಯ ಸ್ತ್ರೀಯರು
ಜರಾಸಂಧ	ಕಾಪಿನ ಭಟರು
ಚಾಣೂರ	ಬಲದವರು
ಮುಷ್ಟಿಕ	ಮಾವಟಿಗ (ಆನೆ)
ಕೃಷ್ಣ	ಹಸ್ತಿಪ್ರಹಸ್ತಿಯರು
ನಂದ	ಉಗ್ರಸೇನ
ಯಶೋದೆ	ಕಂಸನ ತಮ್ಮಂದಿರು ಮೊದಲಾದವರು
ಗೋಪಿಯರು	
ಬಲರಾಮ	ನಂದಗೋಪ

೧



॥ ಶ್ರೀಕೃಷ್ಣಾಯ ನಮಃ ॥

ಶ್ರೀಮದ್ಭಾಗವತದೊಳಗಣ

ಯಕ್ಷಗಾನ

ಬಿಲ್ಲಹಬ್ಬ ಅಥವಾ ಕಂಸವಧೆ

ಮೊದಲನೆಯ ಸಂಧಿ: ಬಿಲ್ಲಹಬ್ಬ

ಶಾರ್ದೂಲವಿಕ್ರೀಡಿತಂ

ಶ್ರೀರಾಧಾಮನಲೋಲಮೋಹಿತಕರಂ ಗೋಪಾಂಗನಾವಲ್ಲಭಂ
ಮಾರಾರೂಪಸಹಸ್ರಕೋಟಿಸದೃಶಂ ದೇವಾದಿದೇವಂ ಹರಿಮ್ ।
ಕಾಮಾರಾತಿಸಖಂ ಕರೀಂದ್ರವರದಂ ಕಾರುಣ್ಯಕಲ್ಪದ್ರುಮಂ
ಕ್ಷೀರಾಂಭೋನಿಧಿವಾಸಶೇಷಶಯನಂ ಶ್ರೀಕೃಷ್ಣದೇವಂ ಭಜೇ ॥

ಭಾಮಿನಿ

ನಿಗಮಕೋಟಿಗಳರಸಿಯರಸು । ತ್ತಗಲಿದವು ನಾಚುತಲಿ ನಿನ್ನಯ । ಅಗಣಿತದ ಮಹಿಮೆಯನು ಬಲ್ಲವರಾರು ತ್ರಿಜಗದಲಿ ॥ ಮುಗಿದು ಕರಪುಟ ಯುಗದಿ ನಾ ಮರೆ । ಹುಗುವೆ ಸೌಭಾಗ್ಯಾದಿ ಸಂಪದ । ಯುಗವ ಪಾಲಿಸು ಲಕ್ಷ್ಮಿ ಯೆನ್ನಯ ಮತಿಗೆ ಮಂಗಲವ ॥ ೧ ॥

ರಾಗ ನಾಟಿ ಝಂಪೆತಾಳ

ಶರಣು ಶ್ರೀಗಣನಾಥ । ಶರಣು ಕೀರ್ತಿಖ್ಯಾತ । ಶರಣು ತ್ರಿಭುವನ ದಾತ । ಶರಣು ಶಿವೆಜಾತ ॥ ಪ ॥ ಬಿಸಜಾಪ್ತಸದೃಶವೊಂ । ದಶನಾದಂತ ದೇವ । ಋಷಿಜನೋದ್ಧಾರ ವರ । ಶಶಿಧರಕುಮಾರ ॥ ಅಸುರಕ್ತವರ್ಣ

ದ್ವಯ । ವೆಸೆವ ಶೂರ್ಪವು ಕರ್ಣ । ಅಸಮಗುಣಗಂಭೀರ । ನಿಶಿಚರ ಕುಠಾರ ॥ ೧ ॥ ಮೂಷಕವರೂಢ ಫಣಿ । ಭೂಷ ಲಂಬೋದರ ಗ । ಣೇಶ ಕರಧೃತಪರಶು । ಪಾಶಾಂಕುಶೇಶ ॥ ದೋಷವಿಘ್ನವಿನಾಶ । ದಾಸಜನಪೋಷ ಜಗ । ದೀಶ ಪಾಲಿಸುಯೆನಗೆ । ಲೇಸ ವಿಘ್ನೇಶ ॥ ೨ ॥ ಅಪ್ಪ ಮೋದಕ ಕಜ್ಜ । ತುಪ್ಪ ಸಕ್ಕರೆಯು ಸಹ । ಚಪ್ಪರಿಸಿ ಮೆಲುತಲಿರು । ತಿಪ್ಪ ಕರಿವದನ ॥ ತಪ್ಪುಗಳ ಕ್ಷಮಿಸುಯೆ । ನ್ನೊಪ್ಪುಗಳ ಮೂಲಿಕೆಯ । ಬಪ್ಪಪುರಧೀಶ ನ । ಮ್ಮಪ್ಪ ವಿಘ್ನೇಶ ॥ ಶರಣು ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಜಯ ನಮೋ ಜಗನ್ನಿವಾಸ ಜಯತು ಪುರುತಜ । ಭಯವಿದೂರ ನುತಿಪ ಜನರಿಗಮಲಸುರಕುಜ ॥ ಪ ॥ ನಿಶಿಚರಾನ್ವಯಾದಿ ಖಳಕುಠಾರ ಸುಚರಿತ । ವ್ಯಸನಭಯವಿದೂರನಮರಪ್ರಸರಪೂಜಿತ ॥ ೧ ॥ ಧರಣಿಧರ ಸರಿತ್ಸುಪೇಂದ್ರ ವರ ಸುಖಪ್ರದ । ದುರಿತತಿಮಿರದಿನಪ ನಿರತ ಸ್ಮರಿಪೆ ತವ ಪದ ॥ ೨ ॥ ಕವಿತೆಯೊಳಗನಂತ ದೋಷವಿರಲುಯೆನ್ನನು । ಕ್ಷಮಿಸಿ ಸಲಹೊ ಸತತ ಹನುಮ ನಮಿಪೆ ನಿನ್ನನು ॥ ೩ ॥

ರಾಗ ಸೌರಾಷ್ಟ್ರ ಅಷ್ಟತಾಳ

ಅಖಿಳಬ್ರಹ್ಮಾಂಡನಾಯಕನ ಪಟ್ಟದ ರಾಣಿ । ತ್ರಾಹಿ ತಾಯೆ । ನಿನ್ನ । ಭಕುತಿಯಿತ್ತೆನಗೆ ರಕ್ಷಿಸು ದಾತೆ ಭಾರತಿ । ತ್ರಾಹಿ ತಾಯೆ ॥ ೧ ॥ ನಿಗಮಾಭಿಮಾನಿ ದೇವತೆಯೆ ರಕ್ಷಿಸುಯೆನ್ನ । ಶ್ರೀಮೂಕಾಂಬಾ । ತಾಯೆ । ಸೊಗಸಿಲಿ ಕವಿತೆಯನುಸಿರ್ವಂತೆ ಮಾಡವ್ವ । ಶ್ರೀಮೂಕಾಂಬಾ ॥ ೨ ॥ ಭಜಕವತ್ಸಲ ಗಂಗಾಧರನೆ ತ್ರಿಯಂಬಕ । ಪಾಹಿ ದೇವ । ದಿವ್ಯ । ರಜತಾದ್ರಿವಾಸ ಪಾಲಿಸು ಯೆನ್ನ ಗೌರೀಶ । ಪಾಹಿ ದೇವ ॥ ೩ ॥

ರಾಗ ಸಾಂಗಲ್ಯ ರೂಪಕತಾಳ

ಅಜಗೆ ಶಾರದೆಗೆ ನಾ ನಮಿಪೆ ಭೂಧರನಿಗೆ । ತ್ರಿಜಗವಂದಿತ ಖಗೇಶ್ವರಗೆ ॥ ಸುಜನಸನಕಸನಂದನನಾರದಾದ್ಯರ । ಭಜಿಸುತೀಕೃತಿಯ ವಿಸ್ತರಿಪೆ ॥ ॥ ೧ ॥ ಅಷ್ಟದಿಕ್ಪಾಲರಿಗೆರಗಿಯಸ್ಮದ್ಗುರು । ಇಷ್ಟದೇವತೆಗಳ ಭಜಿಸಿ ॥ ಶ್ರೇಷ್ಠ ಶ್ರೀಕುಲದೇವತೆಯೆ ಪಾಲಿಸೆನುತ ಸಂ । ತುಷ್ಟನಾಗುತ ವಿರಚಿಸುವೆ ॥ ॥ ೨ ॥ ಬಲಿ ಪ್ರಹ್ಲಾದಂಬರೀಷ ರುಕ್ಮಾಂಗದ । ಕಲಿಪಾರ್ಥವಿದುರನಕ್ರೂರ ॥ ಕಲುಷವರ್ಜಿತ ಭೀಷ್ಮ ಗುರುಕೃಪಾದ್ಯರಿಗೆ ನಾ । ಬಲವಂದು ಕವಿತೆ ವಿಸ

ರಿಪೆ ॥ ೩ ॥ ಬುದ್ಧಿಶೂನ್ಯನು ನಾನಿನ್ನೇನರಿಯೆ ತಪ್ಪು । ಇದ್ದಡೀಕೃತಿಯ ನೋಡುತಲಿ ॥ ತಿದ್ದಿಕೊಳ್ಳುವುದು ಬಲ್ಲವರು ಈ ಕವಿತೆಯ । ಚಿದ್ರೂಪ ಹರಿಯು ರಕ್ಷಿಪನು ॥ ೪ ॥

ವಾರ್ಧಿಕ

ಸೃಷ್ಟಿಸ್ಥಿತಿಲಯದ ಕಾರಣಕೆ ನಾಭಿಯೊಳು ಪರ । ಮೇಷ್ಠಿಯನು ಪೆತ್ತಿಕ್ಕುತವನ ಮುಖದೊಳು ಜಗವ । ದೃಷ್ಟಿಗೋಚರಕೆ ತಂದಖಿಳಜನಜನಿತ ಸ್ಥಾವರಜಂಗಮಾದಿಗಳನು ॥ ಇಷ್ಟದಿಂದವರವರ ತಾರತಮ್ಯದಿ ಬಲುಹ । ಕೊಟ್ಟು ನಡೆಸುವ ದೇವ ನೀನೆಯೇಕೋವಿಷ್ಣು । ಶ್ರೇಷ್ಠ ಶ್ರೀಮೂಲಿಕೆಯ ನರಸಿಂಹದೇವ ಮಾರಮಣನೆನ್ನನು ಪಾಲಿಸು ॥ ೧ ॥

ವಚನ

ಇಂತೀ ಗುರುದೇವಕವಿಪ್ರಾರ್ಥನೆಯಂ ಮಾಡಿ ತತ್ಕಥಾಪ್ರಸಂಗಮಂ ಪೇಳ್ವೆನದೆಂತೆನೆ—

ದ್ವಿಪದಿ

ಹಿಮಕರಕುಲಾನ್ವಯ ಪರೀಕ್ಷಿತನು ನಯದಿ । ವಿಮಲಶುಕ ಯೋಗೀಂದ್ರನಡಿಗೆರಗಿ ಮುದದಿ ॥ ೧ ॥ ನಮಿಸಿ ಕೇಳಿದ ಭಾಗವತಕಥಾ ಮೃತದಿ । ಕಮಲಲೋಚನನು ಅವತರಿಸಿ ಗೋಕುಲದಿ ॥ ೨ ॥ ಬಾಲ ಲೀಲೆಯ ತೋರಿದನಿತು ಸತ್ಕಥೆಯ । ಪೇಳುತಲಿ ಉದ್ಧರಿಸಿದೆಯೊ ಮುನಿ ಕುಲಾರ್ಯ ॥ ೩ ॥ ಮತ್ತೆ ಶ್ರೀವರನು ಮಧುರೆಗೆ ಪೋಗಿ ಪಥದಿ । ಒತ್ತಿ ಗಂಟಲ ರಜಕನನು ಸದೆದು ಮುದದಿ ॥ ೪ ॥ ಸಾಲೋಕ್ಯಪದವಿಯನು ಚಿಪ್ಪಿಗ ನಿಗಿತ್ತು । ಮಾಲೆಗಾರಗೆ ಭಾಗ್ಯ ಕರುಣದಿಂದಿತ್ತು ॥ ೫ ॥ ಮುರುಟಿರುವ ಕುಬುಜೆಡೊಂಕನೆ ತಿದ್ದಿ ನಡೆದು । ಮೆರೆವ ಧನು ಮುರಿದು ಗಜವನು ಕೊಂದು ಬಡೆದು ॥ ೬ ॥ ಮಲ್ಲ ಚಾಣೂರಮುಷ್ಟಿಕರ ಮರ್ದಿಸುತ । ಖುಲ್ಲ ಕಂಸಾ ಸುರನ ಹಿಡಿದೆಳೆದು ಕೊಲುತ ॥ ೭ ॥ ಸಕಲ ಜಗದಾಧಾರನುಗ್ರಸೇನನಿಗೆ । ಪ್ರಕಟದಿಂ ಮಧುರೆಯೊಲಿದಿತ್ತ ಕಥೆಯೆನಗೆ ॥ ೮ ॥ ಕೃಪೆಯಿಂದಲರುಹಬೇಕೆ ನುತಲಡಿಗೆರಗೆ । ಉಪಚಾರದಿಂದೊಪ್ಪುತೆಂದ ಭೂವರಗೆ ॥ ೯ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭೂಲಲಾಮನೆ ಕೇಳು ರಾಧಾ । ಲೋಲನಮಲಕಥಾಮೃತದ ರಸ । ಲೀಲೆಯನು ನಿನ್ನಂತೆ ಸೇವಿಪ । ಶೀಲರುಂಟೆ ॥ ೧ ॥ ಖತಿಯೊಳಶ್ವತ್ಥಾಮನು

ಬಿಟ್ಟ 1 ಸ್ತ್ರವ ನಿವಾರಿಸಿ ನೀ ಪರೀಕ್ಷಿತ । ಪತಿಯೆನುತ ಪೆಸರಿಟ್ಟು ಕಾಯ್ದ ಶ್ರೀ । ಪತಿಯು ನಿನಗೆ ॥ ೨ ॥ ಅರಿಯದಜ್ಞನೆ ನೀನು ಲಕ್ಷ್ಮಿ । ವರನ ಭಕುತನು ಲೋಕದವರುಪ । ಕರಕೆ ಕೇಳುವೆ ಪೇಳ್ವೆ ಶ್ರೀನರ । ಹರಿಯ ಕಥೆಯ ॥ ೩ ॥ ಶ್ರೀರಮಣ ಗೋಕುಲದೊಳಿರಲಿ । ತ್ತಾ ಮಹಾಕಂಸಾಖ್ಯ ಮಧುರೆಯ । ಧಾರಿಣಿಯ ಪಾಲಿಸುತಲಿರ್ದನು । ದಾರತನದಿ ॥ ೪ ॥

ಭಾಮಿನಿ

ರಣದಿಶಾಪಟಮಲ್ಲ ಕಂಸನು । ಗಣನೆಯಿಲ್ಲದ ಕರಿ ತುರಗ ಭಟ । ಗಣ ರಥಾರೋಹರ ಚತುರ್ಬಲವೆರಸಿ ವಿಭವದಲಿ ॥ ಮಣಿಖಚಿತ ಪೀಠದಲಿ ಗಗನಾ । ಮಣಿಯ ಸೋಲಿಪ ತೆರದಿ ಮಂಡಿಸಿ । ಗಣದಿ ಮಧುರೆಯನಾಳುತಿರ್ದನುದಾರ ತೇಜದಲಿ ॥ ೧ ॥

ರಾಗ ಭೈರವಿ ಝಂಪೆತಾಳ

ಇಂತು ವೈಭವದೊಳಿರ । ಲಂತಸ್ಥ ಮನದಿ ಬಹು । ಚಿಂತೆಯನು ತಾಳಿತನ । ಗಂತಕನು ಜಗದಿ ॥ ಪುಟ್ಟಿ ಬೆಳೆವುತಲೆನ್ನ । ಕುಟ್ಟುವನೆನುತಲೆ ತಲೆ । ಮೆಟ್ಟ್ಯಸಿರಿಯಡರಿದಳು । ದಿಟ್ಟೆ ಚಂಡಿಕೆಯು ॥ ೧ ॥ ಎನ್ನ ವೈರಿಯ ತಿಳಿದು । ಬನ್ನಿರೆನುತಸುರಾಪ್ತ । ರನ್ನು ಕಳುಹಿದೆನವರು । ಇನ್ನು ಬರಲಿಲ್ಲ ॥ ಏನಮಾಡಲಿಯೆಂದು । ಮೌನದೊಳಗಿರಲು ಅಜ । ಸೂನು ನಾರದನಿವನ । ಸ್ಥಾನಕಯ್ತಂದ ॥ ೨ ॥

ರಾಗ ಕೇದಾರಗೌಳ ಅಷ್ಟತಾಳ

ಹರಿ ಸರ್ವೋತ್ತಮ ಲಕ್ಷ್ಮಿ । ವರ ಸಚ್ಚರಿತ ದಾಮೋ । ದರ ಮುರಹರ ಪಾಹಿ ಮಾಂ ॥ ಶರಣವತ್ಸಲ ದೀನೋ । ದ್ಧರಣ ಕೌಸ್ತುಭರತ್ನಾ । ಭರಣಭೂಷಿತ ಪಾಹಿ ಮಾಂ ॥ ೧ ॥ ಮೃಡಪಸರೋಜಜಸುರ । ಗಡಣವಂದಿತ ಕ್ಷೀರ । ಕಡಲಶಯನ ಗೋವಿಂದ ॥ ಬಿಡದೆ ರಕ್ಷಿಪುದೆಂದು । ನುಡಿಸಿ ವೀಣೆಯ ಹಂಸೆ । ಯಡರಿ ಕೀರ್ತಿಸುತ ಬಂದ ॥ ೨ ॥ ಒಡನೆದ್ದು ಕಂಸ ಮುಂ । ದಡಿಯಿಟ್ಟು ನಮಿಸಿ ಕಯ್ । ಪಿಡಿದು ಪೀಠವನೇರಿಸಿ ॥ ಪಡಿಗದೊಳಡಿಗಳ । ನಿಡುತುದಕದಿ ತೊಳೆ । ದಡಗೆಡದರ್ಚಿಸಿದ ॥ ೩ ॥

ಕಂದ

ಅಸುರಾರಿಯು ಈಪರಿಯೊಳು । ಕಮಲಾಸನಕುವರೆಂಗಭಿವಂದಿಸಿ ಭಕ್ತಿಯೊಳ್ ॥ ನಮಿಸುತ ನಿಂದಿರುತಿರಲಾ । ಸುಮನಸಮುಷಿಯುವನಂಗವ ತಡವರಿಸುತ್ತೆಂದಂ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಮಗನೆ ಕೇಳ್ ನಿನ್ನಂಥ । ಅಗಣಿತಸೌಭಾಗ್ಯ । ಜಗದೊಳಗಾರಿ ಗುಂಟಿನ್ನು ॥ ಸುಗುಣ ಕಾಂತಿಯು ತಗ್ಗಿ । ಪೊಗವು ಕಪ್ಪೆಸಗಿದ । ಬಗೆಯ ಪೇಳೆನಗೆ ನೀನರಸ ॥ ೧ ॥ ಪರಮಪ್ರೀತಿಯ ಶಿಷ್ಯ । ರಿಹರೆ ಕೇಳ್ ನಿನ್ನಂತೆ । ಧರಣಿಯೊಳೆನಗೆ ಭೂವರನೆ ॥ ಕರಗದೆ ಮನದಲ್ಲಿ । ಕೊರತೆಯನೊರೆಯಲು । ಅರುಹುವೆ ಕೇಳುಪಾಯವನು ॥ ೨ ॥

ರಾಗ ಕಾಂಭೋಜ ಝಂಪೆತಾಳ

ಪೇಳಲರಿಯೆನುಯೆನ್ನ । ಬಾಳುವೆಗೆ ಬಂದೆಡರ । ಕೇಳಲಿಲ್ಲವೆಯಮರ ಮುನಿಪ ॥ ಶೀಲೆ ದೇವಕಿಯುದರ । ದಾಲಯದೊಳುದಿಸೆ ಶಿಶು । ಬಾಲೆ ಚಂಡಿಕೆಯೆಂದೆನಿಪ್ಪ ॥ ೧ ॥ ಪುಟ್ಟಿದವಳಸು ಕಳಚಿ । ಕುಟ್ಟುವೆನುಯೆನುತ ಸೆಳೆ । ದಿಟ್ಟೆ ಗಗನಾಂತರದೊಳವಳು ॥ ಮೆಟ್ಟುತೆನ್ನಯ ತಲೆಯ । ದಿಟ್ಟೆ ಚಿಗಿದಳು ಅಮರ । ಬಟ್ಟೆವಿಡಿದೆನಗೆ ಅರುಹಿದಳು ॥ ೧ ॥ ಮುದದಿ ನಿನ್ನನು ಕಳಚಿ । ಸದೆವನೊಬ್ಬನು ಜಗದೊ । ಳುದುಭವಿಸಿ ಬಳೆವನೆಂದೆನುತ ॥ ಚದುರೆ ಯುವಳೆನಗರುಹಿ । ಬೆದರಿಕೆಯ ಮನಸಿನಲಿ । ಹುದುಗಿಸುತ್ತಡರಿದಳು ನಭಕೆ ॥ ॥ ೩ ॥ ಚಿಗಿದವಳು ಗಮಿಸಲಾ । ಬಗೆಯರಿಯಲೆನುತ ಸಹ । ಸಿಗ ಶಕಟ ಪೂತನಿ ಪ್ರಲಂಬ ॥ ವಿಗಡವತ್ಸಾಸುರನ । ಮಿಗೆ ಕಳುಹೆ ಧೇನುಕರ । ಜಗವ ಶೋಧಿಸಲೆನುತ್ತವರ ॥ ೪ ॥ ಪರಿಯನರಿವರೆ ಪೋದ । ವರನು ಕಾಣದೆ ಮನದಿ । ಕರಗುವೆನು ತಾಪಸೋತ್ತಮನೆ ॥ ಧರಣಿಯನು ಸಂಚರಿಪ । ಕರುಣಿ ನೀ ತಿಳಿದರೆನ । ಗರುಹು ಬೇಗದೊಳು ಮುನಿವರನೆ ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಕೇಳು ಸುಶೀಲ ನೃಪಾಲ ಸತ್ಕಥೆಯ । ಪೇಳುವೆ ನಿನ್ನಯ ಮೂಲ ಸಂಗ ತಿಯ ॥ ಕೇಳು ಸುಶೀಲ ॥ ಪ ॥ ಪಿತನುಗ್ರಸೇನನೆಂದೆನುತ ನೀ ಮನದಿ ಸ । ನ್ಮತಗೊಂಡಿರುವೆಯವನಲ್ಲ ಮುನ್ನೋರ್ವನು । ನ್ನತ ದ್ರಮಿಳನೆಂಬ ತಾನು ॥ ಗಂಧರ್ವ ಕೂ । ಡುತ ನಿನ್ನ ಮಾತೆಯನು । ಪುಟ್ಟಿದೆ ನಿನ್ನ । ಸ್ಥಿತಿಯುಸಿರು ವೆನು ನಾನು । ಪೂರ್ವದೊಳು ನೀ । ನತಿ ಬಲಾನ್ವಿತ ಕಾಲನೇಮಿಯೆಂಬಾ ತನು ॥ ಕೇಳು ಸುಶೀಲ ॥ ೧ ॥ ಯಾದವರೆಲ್ಲ ನಿನ್ನವರೆಯೇ ಮರುಳೆ ಮು । ನ್ನಾದಿಯೊಳಜಮುಖ್ಯ ಸುರರೆಲ್ಲ ದೂರೆ ಶ್ರೀ । ಮಾಧವ ದೇವಕಿಗೆ ॥ ಬಾಲಕ ನಾಗಿ । ಮೋದದಿ ಪುಟ್ಟಲಾಗೆ । ಈ ಶೌರಿ ವಿ । ನೋದದಿ ಗೋಕುಲಕೆ ।

ಒಯ್ದಿರಿಸಿಕೊಂ । ಡಾದಿಮಾಯೆಯನು ತಂದಿತ್ತನು ನಿನಗೆ ॥ ಕೇಳು ಸುಶೀಲ ॥ ॥ ೨ ॥ ಸುರರು ಯಾದವರು ಎಂದರಿತುಕೋ ಮನದಿ ನೀ । ನರಿಯಲಟ್ಟಿದ ವತ್ಸ ಬಕ ಪ್ರಲಂಬಾದ್ಯರ । ತರಿದ ಶ್ರೀಹರಿಯು ತಾನು ॥ ಬಿಲ್ಲಹಬ್ಬವೆಂ । ದರುಹಿ ನಿನ್ನಾಪ್ತರನು । ಅಟ್ಟುತ ಕರೆ । ತರಿಸು ಇಬ್ಲಾತನನ್ನು । ಕೊಲ್ಲುತಲೀ । ಧರಣಿಯಾಳುತ ಸುಖದಿರು ಎಂದರುಹಿದನು ॥ ಕೇಳು ಸುಶೀಲ ॥ ೩ ॥

ಭಾಮಿನಿ

ನುಡಿಯು ಕೇಳುತ ಕಂಸ ಕಂಗಳು । ಕಿಡಿಗೆದರೆ ಝಡಿದಾರ್ಭಟಿಸಿ ಯಡಿ । ಗಡಿಗೆಯೌಡೊತ್ತುತ್ತ ಶೌರಿಯ ಕಡಿವೆನೆಂದೆನುತ ॥ ಮಿಡುಕಿ ಲಂಘಿಸಿ ತುರುಬ ಹಿಡಿದೆಡ । ಗೆಡಹಿ ಖಡ್ಗವ ಚಿಮ್ಮಿ ಕೊರಳಿಂ । ಗಿಡಲು ಮುನಿ ನಾರದನು ಕಂಠವ ಬಿಡಿಸುತಿಂತೆಂದ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಭಳಿರೆ ಭೋಜನೃಪಾಲ ಮೂರ್ಖರ । ತಿಲಕ ವಿಷ ತುಂಬಿರುವ ಉರಗನ । ಗಳವ ಕತ್ತರಿಸದೆಯೆ ಬಾಲವ । ಕಳಚಲೇಕೆ ॥ ೧ ॥ ನಂದಗೋಕುಲ ದೊಳಗಿರುವನಾ । ನಂದಮೂರುತಿ ವಿಷ್ಣುವಿನ ಬಿ । ಟ್ಟೆಂದು ವಸುದೇವನನು ಕೊಲುವುದು । ಚಂದವೇನೈ ॥ ೨ ॥ ಇವನ ಕೊಲಲೋಸುಗವೆ ನಾ ಬಂ । ದವನೆನುತ ಜನರೆನ್ನ ದೂರರೆ । ಜವಗೆ ತುತ್ತಾಗದಿರು ಬಿಡು ನೀ । ನವನಿಯಧಿಪ ॥ ೩ ॥

ವಾರ್ಧಿಕ

ಋಷಿವರ್ಯನೀತೆರದೊಳರುಹಿಸುತ ಬಿಡಿಸಲಾ । ಗಸಮಬಲ ಕಂಸನಾಕ್ಷಣ ಶೌರಿದೇವಕಿಗೆ । ವಿಷಮಸಂಕಲೆ ಕಾಲಿಗವಚಿಸುತ ಬಂಧನವನೆಸಗುತಿರಲಾಗ ಮುನಿಪ ॥ ಝಷ ಕೂರ್ಮ ಕ್ರೋಡ ಕನಕಸುರಹರ ಬಲಿಬಂಧ । ಪಶುಪಾಲಕಸಮದಶಮುಖನಾಶ ನರಪೋಷ । ಭಸಿತಾಂಗ ಕಲ್ಕಿಯೆಂದೆನುತುಸಿರಿ ನುತಿಸ್ಯಮರಋಷಿ ನಭಕ್ಕಡರೆ ಬಳಿಕ ॥ ೧ ॥

ಭಾಮಿನಿ

ಕರುಣನಿಧಿಯನು ಸ್ಮರಿಸಿ ನಾರದ । ತೆರಳಲಿತ್ತಲು ಕಂಸ ಕೇಶಿಯ । ಕರೆದು ನಂದನ ಮನೆಗೆ ಹೋಗುರುತರದಿ ಹರಿಬಲರ ॥ ತರಿದು ಬಾರೆಂದಟ್ಟಿಯಿತ್ತಲು । ಭರದಿ ಸಚಿವರಿಗಾಪ್ತ ಮಾವಂ । ತುರು ಪ್ರಬಲ ಚಾಣೂರ ಮುಷ್ಟಿಕರೊಡನೆಯಿಂತೆಂದ ॥ ೧ ॥

ರಾಗ ಮಧುಮಾಧವಿ ಆದಿತಾಳ

ಕೇಳಿ ಸುಭಟ ಮಲ್ಲಾಳಿ ಮಂತ್ರಿಗಳು । ಪೇಳುವೆ ನಿಮಗೆಯೆನ್ನಾಲೋಚನೆಗಳು ॥ ಕೇಳಿ ॥ ಪ ॥ ಬಂದು ನಾರದನೆನಗಿಂದರುಹಿದ ಮಹಾ । ಸಿಂಧುಶಯನನೆನ್ನನುಜೆಗೆ ಪುಟ್ಟ ॥ ಮಂದಭಾಗ್ಯ ಶೌರಿಯು ನಂದಸದನದೊ । ಳಂದು ಬಾಲನ ಬಿಟ್ಟು ಬಂದನೆನುತ್ತ ॥ ಕೇಳಿ ॥ ೧ ॥ ಬಗೆಯರಿದು ಶೂರಾತ್ಮಜಗೆ ದೇವಕಿಯುಳಿಂಗೆ । ನಿಗಳನಿಕ್ಕ್ಯವರ ಬಂಧನದೊಳಿಟ್ಟೆ ॥ ವಿಗಡ ಶ್ರೀಹರಿಬಲರುಗಳ ಬರಿಸುವೆನು । ಜಗದೊಳವರ ನೀವು ಮಗುಚಿ ಕೊಲ್ಲಲುಬೇಕು ॥ ಕೇಳಿ ॥ ೨ ॥

ರಾಗ ಭೈರವಿ ಅಷ್ಟತಾಳ

ಕೇಳಯ್ಯ ಕಂಸರಾಯ । ನಾವೆಲ್ಲರು । ಪೇಳುವ ಮಾತ ಜೀಯ ॥ ಫಾಲಾಕ್ಷಪ್ರಮುಖ ಮುಖ್ಯರ ನಾವು ಗಣಿಸೆವೀ । ಬಾಲಕರಿದಿರಹರೆ ॥ ಕೇಳಯ್ಯ ॥ ೧ ॥ ಅಳಿಯಂದಿರರು ನಿಮಗೆ । ಕೊಂದರೆ ನಮ್ಮ । ಇಳೆಯೊಳ್ ದೂರರೆ ಕಡೆಗೆ ॥ ತಿಳಿದುದಕ್ಕಂಜಿ ಪೇಳಿದೆವು ನಿಮ್ಮಯ ಮನ । ದೊಳು ನೋಡಿ ಪೇಳಿಸುಗೆ ॥ ಕೇಳಯ್ಯ ॥ ೨ ॥ ಈಸು ನಿನ್ನಯ ಮನದಿ । ಇಷ್ಟರೆ ಕರೆ । ಸಾಶಿಶುಗಳ ಜವದಿ ॥ ಘಾಸಿಮಾಡುವೆವು ನಿನ್ನಾಸೆ ತೀರಿಸುತಲಾ । ದೋಷವ ನಿನಗರ್ಪಿಸಿ ॥ ಕೇಳಯ್ಯ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಧೀರಮಲ್ಲರುಗಳು ಕೇಳಿ । ನಾರದಾಂಕನೆನಗೆ ಪೇಳ್ದ । ವಾರತೆಯನುಸಿರ್ವೆ ಜಗದಾ । ಧಾರ ದೇವನು ॥ ಧಾರಿಣಿಯೊಳು ಜನಿಸಿ ಇಳೆಯ । ಭಾರವಿಳಿಸಲೆಂದು ಕುಲಸಂ । ಹಾರಗೆಯ್ವನೆಂದು ಅಜಕು । ಮಾರನುಸಿರಿದ ॥ ॥ ೧ ॥ ಮುನ್ನ ದ್ರವಿಳನೆಂಬ ಖಚರ । ನೆನ್ನ ಜನನಿ ನೆರೆಯಲಾ ಸಂ । ಪನ್ನ ಪುಟ್ಟಿದೆನು ಜಗದೊ । ಳಿನ್ನ ಬೀಜವು ॥ ಇನ್ನು ಕೇಳಿ ಕಾಲನೇಮಿ । ಯೆನ್ನುತೆನಗೆ ಪೆಸರನಾ ದ । ಯಾರ್ಣವನು ಪೇಳಿಯೆನಗೆ । ಮನ್ನಿಸಿದನು ॥ ೨ ॥ ಕುಹಕಿ ಯಾದವರು ಎನಗೆ । ಅಹಿತರವರು ಕೃಷ್ಣಬಲರು । ಬಹು ಕುತಂತ್ರದಿಂದ ಬರಿಸಿ । ಜವಸಿಗೊಪ್ಪಿಸಿ ॥ ಸಹಸದಿಂದ ರಾಜ್ಯವಾಳೆಂ । ದ್ವಿಹಿತವಚನ ತಿಳುಹುತಮರ । ನಿವಹದೆಡೆಗೆ ಹಂಸೆಯುಡರಿ । ಯಮಿಯು ಪೋದನು ॥ ೩ ॥ ಬರುವ ಚತುರ್ದಶಿಯೊಳವರ । ಕರೆಸಿ ಕೊಡುವೆ ಹಸ್ತಿಮಲ್ಲ । ರುರುಬಲಾನ್ವಿತರು ಕೂಡ್ಯವರ । ಶಿರವ ತರಿವುದು ॥ ದುರಿತ ನಿಮಗೆ ಹೊದ್ದದೆನ್ನು । ತರುಹುತಕ್ರೂರನ್ನ ಕರೆದು । ಕರದಿ ಪಿಡಿದು ವಿಷ್ಟರದಿ ಕು । ಳ್ಳಿರಿಸುತೆಂದನು ॥ ೪ ॥

ರಾಗ ಸುರುಟಿ ಏಕತಾಳೆ

ಕೇಳು ಸುಗುಣನಿಧಿಯೆ । ಯದುಕುಲ । ಮಾಲಶಿಖಾಮಣಿಯೆ ॥ ಬಾಲೆ ಗಾಂಧಿನಿಯುದ । ರಾಲಯಕುಮುದವಿ । ಲೋಲಶಶಾಂಕ ಸು । ಶೀಲ ನೆನ್ನಯ ನುಡಿ ॥ ಕೇಳು ॥ ೧ ॥ ಮೃಡಸರಸಿಜಮರರು । ದೂರಲು । ಕಡಲ ಶಯನನಿದಿರು ॥ ಕೊಡುತಭಯವನವ । ಪೊಡವಿಗವತರಿಸಿ । ಕೆಡಹುತೆಮ್ಮನು ಯದು । ಪಡೆಯು ರಕ್ಷಿಪನಂತೆ ॥ ಕೇಳು ॥ ೨ ॥ ನಂದಸದನದೊಳಗೆ । ಬಲ ಗೋ । ವಿಂದಿಹರೆಂದೆನಗೆ ॥ ಚಂದದಿ ಸುರಮುನಿ । ಯಿಂದೆನಗರುಹಿದ । ನಂದದಿ ಗಮಿಸಿ ನೀ । ತಂದು ನಿಲಿಸವರ ॥ ಕೇಳು ॥ ೩ ॥ ಬಿಲ್ಲಹಬ್ಬದ ನೆವದಿ । ಚತುರ್ದಶಿ । ಯಲ್ಲವರನು ಜವದಿ ॥ ನಿಲ್ಲದೆ ಕರೆತಂ । ದಿಲ್ಲಿಗೊಪ್ಪಿಸೆ ಗುದ್ದಿ । ಕೊಲ್ಲುವೆ ನಾ ಮನ । ಸಲ್ಲೆರಡೆಣಿಸದೆ ॥ ಕೇಳು ॥ ೪ ॥ ನಿನ್ನ ತೆರದೊಳೆನಗೆ । ಆಪ್ತರು । ಇನ್ನಿಲ್ಲ ಜಗದೊಳಗೆ ॥ ಎನ್ನಭ್ಯುದಯ ಸಂ । ಪನ್ನ ನೀ ಪೋಗೆಲೆ । ಪನ್ನಗಾರಿಧ್ವಜ । ನನ್ನು ಬರಿಸು ಬೇಗ ॥ ಕೇಳು ॥ ೫ ॥

ಕಂದ

ಎಂದಾ ಮಾತಂ ಕೇಳುತ । ಗಾಂಧಿಜನೊಪ್ಪುತ ಸಂತಸ ತಾಳ್ದಾ ಕ್ಷಣದೊಳ್ ॥ ಬಂದಾತನ್ಮನೆಗನಿತರೊ । ಳಂದದಿ ರವಿ ಪಶ್ಚಿಮಾಬ್ಧಿಗಿಳಿಯಲ್ ಹಂಬಲಿಸಿದಂ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಧರಣೀಶ ಕೇಳ್ ಮುರಹರನ ಕಾಂಬರ್ತಿಯೊ । ಳೊರಗದೆಯಿರುಳಿನಲಿ ॥ ಮರುಗಿ ಎದ್ದೆದ್ದು ಬಂದ್ಹೊರಗೆ ಯಾದವ ಪೂರ್ವ । ಗಿರಿಯತ್ತ ನೋಡುತ್ತಲಿ ॥ ೧ ॥ ಉದಯಾದ್ರಿಗಡರಿ ಬಂದುದಿಪ ಭಾಸ್ಕರನೇಕೆ । ನ್ನಿದಿರಿಗೆ ಬರಲೊಲ್ಲನು ॥ ಮಧುದ್ವೇಷಿ ಹರಿಯ ಶ್ರೀಪದವ ಕಾಣುವ ಯೋಗ । ವಿಧಿಯು ತಪ್ಪಿಸುವನೇನೊ ॥ ೨ ॥ ತ್ರಿದಶಮೌನಿಗಳ ಸದ್ಹೃದಯದಿ ನೆಲೆಸಿಹ । ಪದುಮನಾಭನ ಪಾದವ ॥ ಮುದದಿ ಕಾಂಬೆನೊ ಕಾಣದಾಪೆನೊ ಬಲ್ಲರಾ । ರಿದನು ಪುಣ್ಯೋದಯವ ॥ ೩ ॥ ಶ್ರುತಿಗಳಾಶ್ರಯಿಸಿ ಸಂಸ್ತುತಿಸಿ ಕಾಣಿಸದ ಶ್ರೀ । ಪತಿ ಕೃಷ್ಣ ಮೂರುತಿಯು ॥ ಮತಿಗೆ ಪ್ರತ್ಯಕ್ಷ ಗೋಚರಿಸಲು ಎನ್ನಂತೆ । ಕ್ಷಿತಿಯೊಳಿನ್ನಾರಿಹರು ॥ ೪ ॥

ಭಾಮಿನಿ

ಶರಣಜನಸುರಧೇನು ಕರುಣಾ । ಕರ ಸುಧಾರ್ಣವ ವಿಷ್ಣು ಶ್ರೀನರ । ಹರಿಯೆ ನಿನ್ನನು ಕಂಡೆನಾದಡೆ ಧನ್ಯ ತಾನೆಂದ ॥ ಧರಣಿಪತಿ ಕೇಳ್ ಮೊದಲು

ನಿನಗಾ । ನರುಹಿದಾ ಖಳ ಕೇಶಿಯೆಂಬನ । ತರಿದು ಹರಿಯಿರಲಿತ್ತ ಪೂರ್ವಾ
ಚಲದಿ ರವಿ ಮೆರೆದ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅತ್ತ ರವಿಯುದಯಾಚಲಕೆ ಬರ । ಲಿತ್ತಲಕ್ರೂರನು ಭವಾಬ್ಧಿಯ । ನುತ್ತರಿಪೆನೆಂದೆನುತ ರಥಕಡ । ರುತ್ತ ಬಂದ ॥ ೧ ॥ ಏಸು ಜನ್ಮಾಂತರದಿ ತಪವ ವಿ । ಶೇಷ ಪ್ರಕೃತಿಯೊಳೆಸಗಿದೆನೊ ನಾ । ಕೇಶವನ ದರುಶನವು ದೊರಕುವು । ದೀ ಸಮಯದಿ ॥ ೨ ॥ ಎಂದು ಜಿಹ್ವಾಗ್ರದಿ ಮುಕುಂದ ಗೋ । ವಿಂದಯೆನುತಡಿಗಡಿಗೆ ನುತಿಸುತಾ । ನಂದಬಾಷ್ಪವನಿಳುಹಿ ರಥವಲಿ । ಬಂದ ಜವದಿ ॥ ೩ ॥ ಬರಬರಲು ವೃಂದಾವನದಿ ಶ್ರೀ । ಹರಿಯ ಹೆಜ್ಜೆಯ ಕಂಡು ರಥದಿಂ । ಧರೆಗೆ ಧೊಪ್ಪನೆ ಕೆಡೆದು ಹುಡಿಯೊಳು । ಹೊರಳುತಿರ್ದ ॥ ೪ ॥ ಚರಣಧ್ವಜ ವಜ್ರಾಂಕುಶದ ಮಹಾ । ಬಿರಿದ ರೇಖಾನ್ವಿತವು ಕ್ಷಿತಿಯೊಳು । ಮೆರೆಮವೊತ್ತಿಹ ಕುರುಹ ಕಾಣುತ । ಪೊರಳ್ದ ರಜದಿ ॥ ೫ ॥

ರಾಗ ಕೇದಾರಗೌಳ ಝಂಪೆತಾಳ

ತ್ರಾಹಿ ಶ್ರೀವರನೆ ದೇವ । ಜಯತು ಜಯ । ತ್ರಾಹಿ ಸುಜನರ ಸಂಜೀವ ॥ ತ್ರಾಹಿ ನಿನ್ನಂಘ್ರಿಯುಗವ । ನಿದ ಕಂಡೆ । ತ್ರಾಹಿ ಜಯಿಸಿದೆನು ಭವವ ॥ ೧ ॥ ಅಡಿಯೆರಡಳೆದು ಪೂರ್ವದಿ । ಖರ್ಪರವ । ನೊಡೆದಮರ ನದಿಯ ನಖದಿ ॥ ಪಡೆದು ಬಲಿಯ ಪಾತಾಳದಿ । ನಿಲ್ಲಿಸಿದೆ । ನಡೆಯದೇನಿದೆ ಚರಣದಿ ॥ ೨ ॥ ಪದನಖಾಗ್ರದೊಳಹಲ್ಯೆಯ । ನುದ್ಧರಿಸಿ । ಮುದದಿ ಋಷಿಗಿತ್ತೆ ಸತಿಯ ॥ ಒದೆದು ದುಂದುಭಿಯಟ್ಟಿಯ । ಹಾರಿಸಿದ । ಮಧಿಕವಿದೆ ಚರಣ ಜೀಯ ॥ ೩ ॥ ಖೂಳ ಶಕಟಾಖ್ಯಸುರನ । ಒದೆದು ಗೋ । ನಾಳಿಯೊತ್ತುತಲಹಿಪನ ॥ ಸೋಲಿಸುತಲಬುಧಿಗಾಗ । ಮುಟ್ಟಿಸಿದ । ಕಾಲ ಹೆಜ್ಜೆಗಳಿದೀಗ ॥ ೪ ॥ ವಿಧಿಭವಾದ್ಯರು ಮೌನದಿ । ಧ್ಯಾನಿಸಿದ । ರಿದನು ಕಾಣರು ಕಾಣದಿ ॥ ಇದು ಎನ್ನ ಮಾಂಸಾಕ್ಷಿಗೆ । ಗೋಚರಿಸಿ । ತಿದಿರಾರು ಜಗದೊಳೆನಗೆ ॥ ೫ ॥ ಎನುತ ಮೆಯ್ಮರೆದು ಕರದಿ । ಹಾರಿಸುತ । ತನುವ ಹೊಳಿದನು ರಜದಿ ॥ ಮನಕರಗಿ ಹೊರಳುತಿಪ್ಪ । ರಥಕಡರಿ । ಘನ ಬೇಗದಿಂದ ನಡೆದ ॥ ೬ ॥

ರಾಗ ಭೈರವಿ ತ್ರಿವುಡೆತಾಳ

ಬಂದನಾಗ । ರಥವಲಿ । ಬಂದನಾಗ ॥ ಪ ॥ ಬಂದನಾಗ ಗೋಕುಲ ದೊಳಿರುತಿಹ । ಸಿಂಧುಶಯನನ ಕಾಂಬ ತವಕದಿ ॥ ಬಂದನಾಗ ॥ ಅ ॥

ಬರುತ ಮನದಲಿ ಹರಿಯ ನೆನೆಸಿದ । ದುರುಳ ಕಂಸನ ಚರನೆನುತ ಶ್ರೀ । ಹರಿಯು ಎನ್ನನು ಕರೆಯನೋ ಮೇಣ್ । ಕರವಿಡಿದು ಮನ್ನಿಪನೊ ನಾನದ। ನರಿಯೆನೀಬ್ರಹ್ಮಾಂಡಮುದರದೊ । ಳಿರಿಸಿಕೊಂಡಿಹನೆಂದು ಶ್ರುತಿಗಳು । ಒರಲುತಿವೆಯೆನ್ನೊಬ್ಬನನು ತಾ । ಕರುಣಿಸದೆ ಬಿಡನೆನುತ ತ್ವರಿತದಿ ॥ ಬಂದ ನಾಗ ॥ ೧ ॥ ನಳಿನಭವಭವವಂದ್ಯ ನಿಗಮಾ । ವಳಿಗಗೋಚರನೆಂಬ ಬಿರುದನು । ತಳೆದು ಮೆರೆದಿಹುದೆನುತ್ತ ನಂದನ । ನಿಳೆಯುದೊಳಗವತರಿಸಿ ಕೆಳೆಯರ । ತಲೆಗೆ ಡೊಣವದಿದೆತ್ತ ಗೋಕುಲ । ವಲಯುದೊಳು ನರನಾಟಕವನನು । ಗೊಳಿಸಿರುವ ಪರವಸ್ತುವಿನ ಪದ । ನಳಿನಕೆರಗದೆ ಬಿಡೆನೆನುತ್ತಲೆ ॥ ಬಂದನಾಗ ॥ ೨ ॥ ಬರಲು ಶತಸಾವಿರ ದಿವಾಕರ । ತೆರದ ಪ್ರಭೆಯೊಳಗಿರುವ ಅರಮನೆ । ಗಿರಿಸಿರುವ ಕಲಶವನು ಕಾಣುತ । ಶಿರವ ಬಾಗಿಸುತಿಳಿದು ರಥವನು । ಧರೆಗೆ ದೊಪ್ಪನೆ ಕೆಡೆದು ದಂಡದೊ । ಲೆರಗಿ ಮುಂದುರುತರದಿ ಬರುತಿರೆ । ಭರದಿ ದ್ವಾರವ ದಾಂಟಿವೊಳಮಂ । ದಿರವ ಪೊಗಲನಿತರೊಳು ಹರಿಯನು ॥ ಕಂಡನಾಗ ॥ ೩ ॥

ರಾಗ ಶಂಕರಾಭರಣ ಅಷ್ಟತಾಳ

ಕಂಡನು । ಶ್ರೀಲೋಲನ । ಕಂಡನು ॥ ಪ ॥ ಕಂಡನು ರತ್ನವಿಷ್ಟರದಿ ಶ್ರೀಹರಿಯನು । ದ್ದಂಡ ಮೂರುತಿಯ ಬ್ರಹ್ಮಾಂಡನಾಯಕನನ್ನು ॥ ಕಂಡನು ॥ ಅ ॥ ಚರಣನೂಪುರ ಗೆಜ್ಜೆ ಪರಿಯ । ಸೊಂಪಿ । ಕೈರಕ ನೇವಳ ಸರಪಣಿಯ । ಇಪ್ಪ । ಕೊರಳ ಕೌಸ್ತುಭಹಾರ ಮಣಿಯ । ರತ್ನ । ಹೆರಳಿಟ್ಟ ಭುಜದಕೀರುತಿಯ ॥ ದಿವ್ಯ । ಕರದೊಳೊಪ್ಪುವ ಶಂಖ ಚಕ್ರವ ಪಿಡಿದಸುಂ । ದರಲಲಾಟದಿ ಮೆರೆದಿರುವ ಶ್ರೀನಾಮವ ॥ ಕಂಡನು ॥ ೧ ॥ ನಲಿದು ತೂಗುವ ಕುಂಡಲಗಳ । ಚೆಲ್ವ । ತಲೆಗಿಟ್ಟ ಮಕುಟ ಹೀಲಿಗಳ । ಉಟ್ಟು । ಹೊಳೆವ ಪೀತಾಂಬರಾದ್ಯಖಿಳ । ಕಂಡು । ಮುಳುಗುತ್ತಾನಂದಬಾಷ್ಪಗಳ ॥ ಕಣ್ಣೊ । ಳಿಳುಹಿಸಿ ದಂಡದಂತಿಳೆಯೊಳೊರಗುತಲೆ । ತಳುವದೆದ್ದೆದ್ದು ತಾ ನಲಿದು ಕೀರ್ತಿಸುತಲೆ ॥ ಕಂಡನು ॥ ೨ ॥ ಬಲದೊಳು ನಂದ ಯಶೋದಾ । ಮುಂದೆ । ಹಲಧರ ಕುಳಿತ ವಿನೋದ । ಕೃಷ್ಣ । ಕರದೊಳೂದುವ ವೇಣುನಾದ । ರುದ್ರ । ಬಲವೈರಿ ನುತಿಪ ಶ್ರೀಪಾದ ॥ ಕಂಡು । ನಳಿನನಾಭನೆಯೆನ್ನನುಳುಹಿಸೊ ದೇವಯೆಂ । ದಿಳುಹಿದ ತನ್ನಯ ತಲೆಯ ಶ್ರೀಚರಣದಿ ॥ ಕಂಡನು ॥ ೩ ॥

ವಚನ

ಇಂತಕ್ರೂರನು ಶ್ರೀಕೃಷ್ಣನ ದಿವ್ಯ[illegible] ಕಂಡು ಏನೆಂದು ಸ್ತುತಿಸುತ್ತಿರ್ದನೆನೆ—

(ಗದ್ಯ) ಚೂರ್ಣಿಕೆ

ಶ್ರೀಮದಖಿಳಾಂಡಕೋಟಿಬ್ರಹ್ಮಾಂಡನಾಯಕಂ ಅಜಭವೇಂದ್ರಾದಿ ವೃಂದಾರಕನಿಕರಶರಣಜನಸಹಾಯಕಂ ಕಪಟನಾಟಕಸೂತ್ರಧಾರಿ ಲೀಲಾ ವಿನೋದಾನಂತಾವತಾರಂ ದುರ್ಜನಪ್ರಾಣಾಪಹಾರಂ ಶ್ವೇತದ್ವೀಪಾನಂತಾ ಸನವೈಕುಂಠಾಧಿವಾಸಂ ಶ್ರೀಲಕ್ಷ್ಮೀಮನೋವಿಲಾಸಂ ಮಾರ್ಕಂಡೇಯ ಮೃಕಂಡು ಪರಾಶರಾಗಸ್ತ್ಯ ಗೌತಮಾತ್ರಿ ವಿಶ್ವಾಮಿತ್ರ ಗಾರ್ಗ್ಯ ಭರದ್ವಾಜ ಸನಕ ಸನಂದನ ನಾರದಾದಿ ಋಷಿಜನಸಮುದಾಯಾರ್ಚಿತಧ್ವಜವಜ್ರಾಂಕುಶ ರೇಖಾನ್ವಿತದಿವ್ಯಚರಣಾರವಿಂದಂ ಶ್ರೀಗೋವಿಂದಂ ಸೌಂದರ್ಯಮಯದೇವ ಕ್ಯದರಾಬ್ಧಿ ಪೂರ್ಣಚಂದ್ರಂ ಸರಸಸದ್ಗುಣಸಾಂದ್ರಂ ವೃಂದಾವನಸಂಚಾರಿತ ನಂದಕಂದ ಮುಕುಂದ ಗೋಪೀಜನಮನಮೋಹಿತಮುದಾರಂ ಗೋಕುಲೋ ದ್ಧಾರಂ ಶಕಟ ಪ್ರಲಂಬ ಪೂತನಿ ಧೇನುಕ ವತ್ಸ ವಾತಾಸುರ ಬಕಾಶ್ವ ಕೇಶಿ ವೃಷಭಾಸುರಾದ್ಯಖಿಳಕುಜನಕುಠಾರಂ ಸಕಲಜಗದಾಧಾರಂ ಮುರಳೀಗಾನ ವಿನೋದಿ ವಜ್ರ ವೈಢೂರ್ಯ ಗೋಮೇಧಿಕ ಪುಷ್ಯರಾಗ ಪ್ರವಾಳ ಮೌಕ್ತಿಕ ರತ್ನಮಾಲಾಲಂಕೃತಂ ಶ್ರೀತರುಣತುಳಸೀಮಾಲಾಶೋಭಿತಂ ಧ್ರುವ ಪ್ರಹ್ಲಾ ದಾಂಬರೀಷ ಸುಧಾಮೋದ್ಧವ ರುಕ್ಮಾಂಗದ ಧರ್ಮಾಂಗದ ವಿದುರ ಭೀಷ್ಮ ದ್ರೋಣ ಯುಧಿಷ್ಠಿರ ವಿಜಯ ಬಲಿ ವಿಭೀಷಣಾದಿ ಭಾಗವತಜನನಿಕರಾರ್ಚಿತ ದಿವ್ಯಶ್ರೀಚರಣಂ ಗೋವರ್ಧನೋದ್ಧರಣಂ ಮಮ ರಕ್ಷಕ ಜಗನ್ನಿವಾಸಮಾದಿ ನಾರಾಯಣ ರಮಾರಮಣದೇವಂ ಶ್ರೀಕೃಷ್ಣಂ ಭಜೇಹಂ ಭಜೇಹಂ ಭಜಾಮಿ॥

ಭಾಮಿನಿ

ಅರಸ ಕೇಳೈ ವಿಮಲ ವಿಶ್ವಂ। ಭರನ ನುತಿಸಿಯಕ್ರೂರನೊಡಲನು। ಚರಣಕಮಲದೊಳಿಳುಹಿ ಮತ್ತೆದ್ದೆರಗಿದನು ಪದಕೆ। ಭರದಿ ಸುಖಬಾಷ್ಪ ವನು ಚರಣದಿ। ಸುರಿದು ಮತ್ತೆರಗುತಿರೆ ಕರುಣಾ। ಕರನು ಭಕುತನ ಶಿರವ ನೆಗಹುತಲಪ್ಪಿದನು ಬಿಡದೆ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಜಲಧಿಸುತೆಯುಳನಪ್ಪುವಾ ಮೃದು। ಚೆಲುವ ತೋಳಿನೊಳೀದು ಭಕುತನ। ತೊಲಗಿಸದೆ ಬಿಗಿದಪ್ಪಿದನು ಬರ। ಸೆಳೆದು ಬಿಡದೆ ॥ ೧ ॥ ಕಡು

ದಯದೊಳಾಸನವನಡರಿಸು । ತಡಿಗಳನು ತೊಳೆದರ್ಘ್ಯಪೂಜೆಯ । ಬಿಡದೆ ರಚಿಸುಣಿಸುತ ಸುಭಾಷಿತ । ನುಡಿಯುಸಿರಿದ ॥ ೨ ॥ ಬಾಂಧವನು ನೀನೆಮಗೆ ನಮ್ಮಯ । ಮಂದಿರಕೆ ಬರಲಿಂದು ಸುದಿನವು । ಸಂದುದೆಮ್ಮಯ ಕುಲಪವಿತ್ರತೆ । ಗೆಂದು ನುಡಿದ ॥ ೩ ॥ ದೇವಕನು ದೇವಕಿಯು ಶೌರಿಯು । ಮಾವನುಗ್ರಸೇನಾಖ್ಯ ಯದುಕುಲ । ಠೀವಿಯೊಳಗಿರುತಿಹರೆ ಮಧುರೆಯ । ಭೂವಲಯದಿ ॥ ೪ ॥ ಮಾನನಿಧಿ ನೀ ಬಂದ ಕಾರಣ । ವೇನದರುಹೆನಲೆದ್ದು ದೈನ್ಯದಿ । ದಾನವಾಂತಕಗೆರಗುತೆಂದ ನಿ । ಧಾನದಿಂದ ॥ ೫ ॥

ರಾಗ ಕಾಂಭೋಜ ಝಂಪೆತಾಳ

ಜಯತು ಜಗದೀಶ ಮಹಾ । ಭಯನಿವಾರಣ ನೀನೇನ । ರಿಯದೊಲು ಕೇಳುವೆಯ ದೇವ ॥ ದಯದಿ ಕೇಳಾದರೆ । ಮ್ಮಯ ಕುಲಕೆ ಬಂದ ಅಪ । ಜಯವ ಪೇಳುವೆ ಪರಾಭವವ ॥ ೧ ॥ ಸುರಮುನಿಯು ಬಂದರುಹಿ । ದನುಖಳಾಧಮಗೆ ಶ್ರೀ । ಹರಿಯೆ ನೀ ಜನಿಸಿದಾಕ್ಷಣದಿ ॥ ಭರದಿ ತಂದಿಲ್ಲಿ ಸಿನ್ನಿಟ್ಟು ಶೌರಿಯು ಮಾಯಾ । ತರುಣಿಯನು ತಂದಿತ್ತನೆನುತ ॥ ೨ ॥ ಶಕಟ ವಾತಾಸುರನ । ಬಕ ಧೇನುಕನ ಪ್ರಲಂ । ಬಕಶ್ವಾಸುರ ವೃಷಭಾಸುರರ ॥ ಸಕಲರನು ತರಿದು ಯದು । ನಿಕರ ಪಾಲಿಪನೆಂದು । ಯುಕುತದೊಳಗರುಹಿದನು ಮುನಿಪ ॥ ೩ ॥ ಕೇಳಿದಾಕ್ಷಣದಿ ಖಳ । ಬಾಳಗೊಡೆನೆನುತ ಯದು । ಜಾಲವನು ಹಿಡಿತರಿಸುತವರ ॥ ಕಾಲಿಗಳಿಗವಚಿ ನಿಗ । ಳವ ಬಂಧಿಸಿದನು ಶ್ರೀ । ಲೋಲ ಕೇಳೆನ್ನ ಬಿನ್ನಪವ ॥ ೪ ॥ ಮಿಕ್ಕ ಯಾದವರು ಬಹು । ದಿಕ್ಕಿಗೋಡಿದರೆನ್ನ । ಠಕ್ಕಿಸುತ್ತಿಲ್ಲಿ ಕಳುಹಿದನು ॥ ಒಕ್ಕಣಿಸಲಿನ್ನೇನು । ದುಃಖಿಯಾಗಿಹೆ ನೆನಲು । ನಕ್ಕನಸುರಾರಿ ಹರುಷದಲಿ ॥ ೫ ॥

ರಾಗ ಶಂಕರಾಭರಣ ತ್ರಿವುಡೆತಾಳ

ಕೇಳು ಕೃತವರ್ಮಕಸಹೋದರ । ಪೇಳ್ವೆ ನಾ ನಿನಗೀಗ ಯದುಕುಲ। ಜಾಲವೆಲ್ಲವ ದಣಿಸಿದನೆ ಮಹ । ಖೂಳಸವನು ॥ ೧ ॥ ತಾಳಿ ದಿನವು ಸವಿಾಪವಿದೆ ನಿ । ಮ್ಮಾಳಿದನಿಗೇನಿನ್ನು ಪರಮ ಕೃ । ಪಾಳು ಶಿವ ತಾ ಕರುಣಿಸದೆ ಬಿಡ । ಕೇಳಿ ನಿಮಗೆ ॥ ೨ ॥ ಈತೆರದೊಳರುಹುತ ಕೃಪಾನಿಧಿ । ಮಾತೆಗೆರಗಿದ ಪಿತಗೆ ಸಹ ಸಹ । ಜಾತರೊಡನಿಂತೆಂದ ಲಕ್ಷ್ಮೀ । ನಾಥನೊಲಿದು ॥ ೩ ॥ ಬಿಲ್ಲಹಬ್ಬವ ನಡೆಸುವನು ಗಡ । ಮಲ್ಲ ಕಂಸನು ದಯದಿ ತಾ ನ । ಮ್ಮೆಲ್ಲರನು ಬರಲೆನುತಲಟ್ಟಿದ । ನಿಲ್ಲಿಗಿವನ ॥ ೪ ॥ ವಧಿಮೊಸರ

ಭಾಂಡಗಳ ಶಕಟದಿ। ಉದಯದೊಳಗತಿಬೇಗ ತುಂಬಿಸಿ। ಮುದದಿ ಕೆಳೆಯರು ಸಹಿತ ಪೊರಡಲಿ । ಮಧುರೆಗಿನ್ನು ॥ ೫ ॥

ಭಾಮಿನಿ

ಇಂದುವಂಶಾಧಿಪನೆ ಕೇಳರ । ವಿಂದನಾಭನು ಕೆಳೆಯರೊಡನಾ । ನಂದದಿಂ ಮಧುರೆಗೆ ವಿನೋದದಿ ಪೊರಟನಾಲಯುಪ ॥ ಇಂದುವದನೆಯ ರರಿತು ಧೈರ್ಯವ । ಕುಂದಿ ಮರುಗುತಲೊಂದು ಠಾಣದಿ । ಬಂದು ನೆರೆವುತ ತಮ್ಮತಮ್ಮೊಳಗೆಂದರಬಲೆಯರು ॥ ೧ ॥

ರಾಗ ಘಂಟಾರವ ಏಕತಾಳ

ಸಖಿಯರು ಕೇಳಿರೀಗ । ಪಯಣವ ಗೆಯ್ವ । ಬಕವೈರಿ ಮಧುರೆಗೀಗ ॥ ಭಕುತವತ್ಸಲನ ಭೋಗ । ತಪ್ಪಿತಮ್ಮಮ್ಮ । ವಿಕಳಿಸಿತೆಮ್ಮ ಯೋಗ ॥ ೧ ॥ ದುರುಳ ಕಂಸನ ನೆವದಿ । ಬಂದಿಹನೊರ್ವ । ಮರುಳಕ್ರೂರನು ಜವದಿ ॥ ಹರಿಯ ಕೊಂಡೊಯ್ವಸಂತೆ । ಗೋಕುಲದಿ ನಾ । ವಿರಲುಚಿತವೇನೆ ಮುಂತೆ ॥ ॥ ೨ ॥ ಕ್ರೂರ ಪಾಪಿಗೆ ಜನರು । ದಿವ್ಯ ನಾಮವ । ಕ್ರೂರನೆಂದಿಟ್ಟರಾರು ॥ ಶೀರಿತಿಂದೆಮ್ಮಾಸೆಯು । ವಿಘಾತನಿಂದು । ಬೇರು ತರಿದ ಪಾಪಿಯು ॥ ೩ ॥ ಮಧುರೆಯೊಳಿಹ ಸ್ತ್ರೀಯರು । ಮಂತ್ರಮಾಯದಿ । ಚದುರೆಯರಾಗಿಹರು ॥ ಮಧುದ್ವೇಷಿ ಹರಿಯ ನೋಡಿ । ಮೆಚ್ಚಿ ಮತ್ತಿಲ್ಲಿ । ಗೊದಗಲು ಬಿಡರು ಕೂಡಿ ॥ ೪ ॥ ಎಷ್ಟು ತಪವ ಗೆಯ್ದರೊ । ಆ ಸತಿಯರಿ । ನ್ನೆಷ್ಟು ಭಾಗ್ಯಾಧಿಕರೊ ॥ ಕೃಷ್ಣಮೂರುತಿಯ ನೋಡಿ । ಕೂಡುವರು ತ । ಮ್ಮಿಷ್ಟಾರ್ಥಗಳನು ಬೇಡಿ ॥ ೫ ॥ ಕೆಟ್ಟೆವಲ್ಲಯ್ಯೊ ಹರಿಯೆ । ನಮ್ಮೆಲ್ಲರನ್ನು । ಬಿಟ್ಟು ಪೋಪೆಯೊ ಧೊರೆಯೆ ॥ ಇಷ್ಟಾರ್ಥವೆಮಗೀವರು । ನಿನ್ನಂತೆ ದೇವ । ಸೃಷ್ಟಿಯೊಳಾರಿಹರು ॥ ೬ ॥

ಭಾಮಿನಿ

ಆರು ಗತಿ ಹೇಳೆಮಗೆ ನಿನ್ನವೊ । ಲಾರು ಕಾಯ್ವವರಕಟ ಕರುಣಾ । ವಾರಿಧಿಯೆ ಹಾ ಕೃಷ್ಣ ಹಾಯೆಮ್ಮಗಲುವೆಯ ಹರಿಯೆ ॥ ದಾರಿಗಾಣದೆ ಘೋರ ಅಡವಿಯ । ಸೇರಿದಂತಾಯ್ತೆಮಗೆ ಕರುಣೆಯ । ಬೀರಿ ಸಲಹೊ ಕೃಪಾಕರನೆಯೆಂದಳಲಿ ಹೊರಳಿದರು ॥ ೧ ॥

ರಾಗ ನೀಲಾಂಬರಿ ಆದಿತಾಳ

ಏನಮ್ಮಾ। ಮುಂದಿ । ನ್ನೇನಮ್ಮ ॥ ಏನಮ್ಮ ಶ್ರೀರಂಗ । ಧಾಮನೀ ಊರಗಲುವನಂತೆ ॥ ಪ ॥ ಚಿದ್ರೂಪ ಹರಿಯು ಒಲ । ಭದ್ರ ಕೂಡಕ್ರೂರ

ನೊಡನೆ ನ । ವ್ವಿುದಿರಿಗೆ । ಪೋಪ । ಮಧುರೆಗೆ ॥ ೧ ॥ ಸಕಲಂತರ್ಯಾಮಿ ಗಿನ್ನಾವ । ಶಕುನವಡ್ಡವಿಸದೆತ್ತ । ಪೋದವೆ । ಕಾಣ । ದಾದವೆ ॥ ೨ ॥ ಮಾರನ ಬಾಧೆಗೆ ಜೀವ । ಸೂರೆಬಿಟ್ಟೆವ್ಮಗಲಿ ಪೋಪ । ನೇನಕ್ಕ । ನಮಗಿ । ನ್ನವ ಸಿಕ್ಕ ॥ ೩ ॥ ಜಗದಾಧಾರನಾದರೆಮ್ಮ । ಬಗೆಯರಿಯನೇನೆ ದಿಟ್ಟ ಶ್ರೀ । ವರನೇನೇ । ಈತ । ನರನೇನೇ ॥ ೪ ॥ ಬಾಳುವೆನೆಂತಯ್ಯೊ ಗೋಕುಲ । ಹಾಳಾಯಿತು ವ್ಯರ್ಥ ನಾವಿ । ಲ್ಲಿರುವುದು । ಊರ । ತೊರೆವುದು ॥ ೫ ॥ ಈ ತೆರದೊಳೆಲ್ಲರು ಶ್ರೀ । ನಾಥ ರಕ್ಷಿಸೆನುತ ಬಾಯ । ಬಿಟ್ಟರು । ಬಹು ಗೋ । ಳಿಟ್ಟರು ॥ ೬ ॥

ಕಂದ

ಭೂಪಾಲಕ ಲಾಲಿಸಿ ಕೇಳ್ । ಶ್ರೀಪತಿಯನೆ ನೆನೆನೆನೆದಳುತಿರೆ ಮನ ದೊಳಗಂ ॥ ಗೋಪಾಂಗನೆಯರ್ ದುಗುಡದೊ । ಳೀಪರಿ ಪ್ರೌಢೆಯೊರ್ವಳಿಂ ತೆಂದಳು ಧೈರ್ಯದೊಳಂ ॥

ರಾಗ ಸೌರಾಷ್ಟ್ರ ಅಷ್ಟತಾಳ

ಏತಕೆಲ್ಲರು ಸುಮ್ಮನೊರಲಿ ಬಾಯ್ ಬಿಡುವಿರಿ । ನ್ನೇಳಿರವ್ವ ॥ ಪ್ರಾಣ । ನಾಥ ಶ್ರೀಹರಿಯ ದಾರಿಯೊಳಡ್ಡಗಟ್ಟುವ । ಏಳಿರವ್ವ ॥ ೧ ॥ ನೀತಿಕೋವಿದ ನೆಂದು ಸೋತೆವು ಮುನ್ನ ನಾವ್ । ನೋಡೆ ತಂಗಿ ॥ ಇಂಥ । ಪಾತಕಿ ನಮಗೊಂದು ಮಾತರುಹದೆ ಪೋಪ । ನೋಡೆ ತಂಗಿ ॥ ೨ ॥ ಎರೆಯರ ಬಿಟ್ಟು ಶ್ರೀಹರಿಯ ನಂಬಿದ್ದೆವು । ಅಮ್ಮ ಕೇಳಿ ॥ ಇಂಥ । ಕೊರಳುಗೊಯಿಕನ ನಂಬಿ ಮರುಳಾಟವಾಯಿತು । ಅಮ್ಮ ಕೇಳಿ ॥ ೩ ॥ ಎಮಗೆ ನಾಚಿಕೆಯಿನ್ನೆ ಲ್ಲಿಹುದು ಮುಂಬರಿಯಬೇ । ಕೇಳಿರಮ್ಮ ॥ ತೇರು । ಗಮಿಸದಂದದೊಳಡ್ಡ ಗಟ್ಟ ನಿಲ್ಲಿಸುವ ನಾ । ವೇಳಿರಮ್ಮ ॥ ೪ ॥

ಭಾಮಿನಿ

ಅರಸ ಕೇಳಿತ್ತುದಯದಲಿ ಶ್ರೀ । ಹರಿಯು ಹಲಧರನೊಡನೆ ಗಾಂಧಿನಿ । ತರಳನೇರಿದ ರಥದೊಳಡರುತ ನಂದನಂದಣದಿ ॥ ಭರದಿ ಗೆಳೆಯರುಸಹಿತ ಮಧುರಾ । ಪುರಕೆ ಪಯಣವ ಗೆಯ್ಯೆ ಮಾರ್ಗದಿ । ಬರಲು ಗೋಪಿಯರರಿತು ಬಂದಡ್ಡಯಿಸಿದರು ಬಿಡದೆ ॥ ೧ ॥

ರಾಗ ನೀಲಾಂಬರಿ ರೂಪಕತಾಳ

ಎಲ್ಲಿಗೆ ಪೋಗುವೆ ಭಾಗ್ಯ ಸಂ । ಪನ್ನನೆಯೆಮ್ಮಗಲುವೆ ತರ । ವಲ್ಲವೊ ನಿಲ್ಲೆಲೊ ಲಕ್ಷ್ಮೀ । ವಲ್ಲಭ ನುಡಿ ದಯದಿ ॥ ಎಲ್ಲಿಗೆ ॥ ಪ ॥ ಪತಿಯರ ತೊರೆ

ದಗಲುತ ಮುರ । ಮಥನನೆ ನಿನ್ನೊಳು ಮಾರನ । ರತಿಗೊದಗುತ ಬಿಡಲಾರದೆ । ಜತೆಗೂಡುತಲಿಹೆವು ॥ ಗತಿಯು ನೀನಲ್ಲದೆ ಬೇರಿ । ನ್ನಿತರರ ಕಾಣೆವು ಎಮಗೆ । ಗತಿಯನು ತೋರಿಸಿ ಮುಂದಕೆ । ಜತನದಿ ನಡೆ ನೀನು ॥ ೧ ॥ ತುರುವಿಂಡೆಬ್ಬಿತ ಕೆಳಯರ । ನೆರಹಿಸಿ ವೃಂದಾವನದೊಳು । ತೆರಳಲು ಬರುವನಕ । ನರಿದೆವು ಯುಗವಾಗಿ ॥ ಮುರಲಿಯ ಧ್ವನಿ ಕೇಳುತ ಮನ । ಮರುಳಾಗುತ ನಾಚಿಕೆಯನು । ತೊರೆದಿದಿರ್ಗೆ ಬಂದಪ್ಪುತ । ಮರೆವೆವು ವಿರಹವನು ॥ ೨ ॥ ದಧಿಘೃತಭಾಂಡಗಳೊಡೆವುತ । ಕುದುಕುತ ಕುಚಗಳ ಪಿಡಿವುತ । ವಿಧವಿಧದಾಟಗಳಾಡುತ । ಬದಿಗೆ ನೀ ಬದಿಗೊಡುತ ॥ ಎಡೆಗಡ ರುತಲೆಮ್ಮನು ಬಲು । ಹದದಲಿ ರಮಿಸುತ ಸೌಖ್ಯವ । ಮುದದಲಿ ತೋರಿಪ ರಿರುವರೆ (ಧರೆಯೊಳು) । ಚದುರನೆ ನಿನ್ನಂತೆ ॥ ೩ ॥ ಬೇಸರವಾದರೆಯೆಮಗೆ ಯು । ಶೋಜೆಗೆ ದೂರುವ ನೆಪದಿ ವಿ । ಲಾಸದಿ ನಿನ್ನಯ ಮನೆಗೆ ನಾವ್ । ವಾಸಿಯೊಳಯ್ತುಹೆವು ॥ ಶ್ರೀಶನೆ ನಿನ್ನನು ನೋಡಿ ಸಂ । ತೋಷದಿ ದಿನ ಗಳೆದೆವು ಜಗ । ದೀಶನೆ ನೀ ಪೋದರೆ ಪರ । ವೇಶಿಗರಾವಯ್ಯ ॥ ೪ ॥ ಬೆಡಗಿನ ಮಥುರೆಯ ಸ್ತ್ರೀಯರು । ಬಿಡುವರೆ ನಿನ್ನನು ಹಿಂದಕೆ । ಒಡವೆಯರಾವಲ್ಲವೆ ಜಗ । ಮೊಡೆಯ ನಮ್ಮಗಲುವೆಯ ॥ ಬಿಡಲಾರೆವು ನಿನ್ನನು ಎಂ । ದಡಿಗಡಿ ಗೆರಗುತ ವೈಸ್ಯದಿ । ಒಡಲುಗಳನು ಕೆಡಹುತ ರಥ । ದಡಿಯೊಳು ಚಾಚಿದರು ॥೫॥

ವಾರ್ಧಿಕ

ಕ್ಷಿತಿನಾಥ ಕೇಳ್ ಗೋಪಸತಿಯ ನಿಕುರಂಬ ಮುರ । ಮಥನರಥ ದಡಿಯೊಳಗೆ ಮತಿಮರೆದು ಬಿದ್ದು ಪೊರ । ಳುತಲಿ ಬಾಯ್ಬಿಡುತ ಹರಿ ಗತಿ ನೀನೆನುತ್ತ ಬಲು ಸ್ತುತಿಸುತೇಳದೆಯೆರಗುತ ॥ ಜತೆಯಗಲುವನು ಪ್ರಾಣಪತಿ ಯೆನುತ ಮರುಗಲಾ । ರತಿಪತಿಯ ಪಿತನುವುನ್ನತ ಕರಗಳೆತ್ತಿ ತೋ । ರುತ ಲಭಯವಿತ್ತವರೊಳತಿದಯದಿ ನುಡಿದ ನನುಮತದಿ ಮೃದುವಚನದಿಂದ ॥೧॥

ರಾಗ ಸಾರಂಗ ಅಷ್ಟತಾಳ

ಬಾಲೆಯರುಗಳು ಕೇಳಿ । ದುಃಖಿಸದಿರಿಯೆ । ದ್ದೇಳಿ ಧೈರ್ಯವನು ತಾಳಿ ॥ ಪಾಲಿಪೆ ನಿಮ್ಮನಂಜದಿರಿನ್ನು ಗೋಕುಲ । ದಾಲಯದಲಿ ತೋಷವ । ತಾಳಿರಿ ನೀವು ॥ ೧ ॥ ಮಧುರೆಯಧಿಪ ತನ್ನಲ್ಲಿ । ಬಿಲ್ಲಹಬ್ಬವೆಂ । ದಧಿಕ ಸಂತೋಷದಲಿ ॥ ಚದುರಕ್ರೂರನ ತಾನಿಲ್ಲಟ್ಟಿದನೆನ್ನ । ಸದನಕೆ ಒಯ್ಯಲೆಂದು । ಪೋಪೆವಾವಿಂದು ॥ ೨ ॥ ಬರಿದೆ ದುಃಖಿಸಲು ಬೇಡಿ । ನಾಡ್ಡಿಲ್ಲಿಗೆ । ಬರುವೆನು

ನಿಜವು ನೋಡಿ ॥ ಕರಗದೆಲ್ಲರು ನಿಮ್ಮವರೊಳು ಬೆರಸುತ್ತ । ಲಿರಿ ನಿಮ್ಮ ಗೃಹದಿ ಬೇಗ । ಪೋಗಿ ನೀವೀಗ ॥ ೩ ॥

ರಾಗ ಮಾರವಿ ಏಕತಾಳ

ಈ ತೆರದಲಿ ಸತಿಯರಿಗಭಯವನು ಶ್ರೀ । ನಾಥ ಪಾಲಿಸಿ ದಯದಿ ॥ ತಾ ತಡೆಯದೆ ಸಹ । ಜಾತಸಹಿತಲಿ ಸ । ಮೇತಕ್ರೂರನು ರಥದಿ ॥ ೧ ॥ ಏರಿ ಹಾರಿಸಲು ಆ । ನಾರಿಯ ನಿವಹ ಮು । ರಾರಿಯನೀಕ್ಷಿಸುತ ॥ ಭಾರಿ ಪಿರಿದು ಬಾ । ಯಾರಿ ಬಿದ್ದುರುಳಿ ಶ । ರೀರವ ಮರೆದಳುತ ॥ ೨ ॥ ನೀರೆಯ ರೆದ್ದು ಆ । ತೇರು ಮುಂಬರಿಯುಲು । ದೂರದಿಂದೀಕ್ಷಿಸುತ ॥ ತೇರಿನ ಕುದುರೆ । ಸಾರಥಿ ಧ್ವಜಕಲಶವ । ಮಿಾರಿ ಹಾರುವ ರಜವು ॥ ೩ ॥ ತೋರುವನಕ ಶಿರ । ವೇರಿ ಮೇಲೆತ್ತಿ ಕಾ । ಲೂರಿ ನೆಗೆದು ನೋಡಿ ॥ ತೀರಿತು ಋಣವೆನು । ತೂರಿಗೆ ಮರಳಿ ಬಾ । ಯಾರಿ ಬಂದರು ಕೂಡಿ ॥ ೪ ॥

ವಾರ್ಧಿಕ

ಪೃಥ್ವೀಶ ಕೇಳಿತ್ತ ಹರಿಯು ರಾಮರು ಗೋಪ । ಮೊತ್ತ ಸಹಿತಲಿ ಸುತ್ತುಮುತ್ತು ಭಂಡಿಗಳೆಸೆಯೆ । ಉತ್ತಮದ ಕಾಳಿಂದಿಹತ್ತಿರಕೆ ಬಂದಾಗ ಚಿತ್ತಜನ ಪಿತನು ನದಿಯ ॥ ನುತ್ತರಿಸಲೆನುತ ಕರೆಸುತ್ತ ಗುಹನಿಗೆ ನೇಮ । ವಿತ್ತು ಸರ್ವರು ಜಲವ ದಾಂಟುತಾಚೆಗಡರಿರ । ಲಿತ್ತ ಗಾಂಧಿಜ ನದಿಯ ಹತ್ತಿರಕೆ ಬಂದಾಗ-ಬಿತ್ತರಿಸುತಿರುತಿರ್ದನು ॥ ೧ ॥

ರಾಗ ಯರಕಲಕಾಂಭೋಜ ಅಷ್ಟತಾಳ

ಲಾಲಿಸಿ ದಯದಿ ಕೇಳು । ಬಿನ್ನಪವ ಶ್ರೀ । ಲೋಲ ಕರುಣಕೃಪಾಳು ॥ ಬಾಲಕ ಧ್ರುವ ಪ್ರಹ್ಲಾದರ ಮುನ್ನ । ಪಾಲಿಸಿದಂತೆಯೆನ್ನ । ಕಾಯೊ ಪ್ರಸನ್ನ ॥ ॥೧॥ ನಿನ್ನಯ ಶ್ರೀಮೂರ್ತಿಯ । ಕಂಡಮೇಲೆನ । ಗಿನ್ನು ಬೇರೇನಾಸೆಯು ॥ ಜನ್ಮದಿ ಜನಿಸಿ ಬಂದಾಮೇಲೆ ಸತ್ಕೀರ್ತಿ । ಯನ್ನು ರಚಿಸಬೇಕೆಂದು । ಮನಸಿಗಿಂದು ॥ ೨ ॥ ಇಂದು ಕಾಳಿಂದಿಯೊಳು । ಸ್ನಾನವ ಗೆಯ್ವೆ । ನೆಂದಾಸೆಯೆನಗೆ ಕೇಳು ॥ ತಂದೆಯಪ್ಪಣೆಯ ಪಾಲಿಸು ದೇವ ಜವದಿ ನಾ । ಮಿಂದು ಬರುವೆ ನಿಲ್ಲಿಗೆ । ಈ ಗಳಿಗೆಗೆ ॥ ೩ ॥ ಶರಣನ ನುಡಿಯ ಕೇಳಿ । ಪೇಳಿದನು ಶ್ರೀ । ಹರಿಯು ಸಂತಸವ ತಾಳಿ ॥ ತೆರಳಿ ಸ್ನಾನವ ಗೆಯ್ದು ಬರುವನಕಿಲ್ಲಿ ನಾ । ನಿರುವೆ ರಥದಲಿ ಈಗ । ಪೋಗಿ ಬಾ ಬೇಗ ॥ ೪ ॥

ಭಾಮಿನಿ

ಇಂತು ಯಾದವಕುಲಶಿಖಾಮಣಿ । ಯಂತರಾತ್ಮಕನೊಡನೆ ನೇಮವ । ಸಂತಸದಿ ಕೊಂಡಾಗ ನದಿಯೆಡೆಗಾಗಿ ನಡೆತಂದ ॥ ಮುಂತೆ ಸಂಕಲ್ಪಾದಿ ಸ್ನಾನವ । ನಿಂತು ವಿರಚಿಸಿ ಮುಳುಗೆ ನೀರೊಳು । ಕಂತುಜನಕನ ದಿವ್ಯ ಮೂರ್ತಿಯ ಕಂಡನಕ್ರೂರ ॥ ೧ ॥

ರಾಗ ಯರಕಲಕಾಂಭೋಜ ಝಂಪೆತಾಳ

ಕಂಡನಕ್ರೂರ ನೀರೊಳಗೆ ಶ್ರೀಹರಿಯ । ಕಂಡು ಭ್ರಮೆಯುಡರಿ ಭಯ ಗೊಂಡೆದ್ದು ಕಳವಳಿಸಿ ॥ ಕಂಡನಕ್ರೂರ ॥ ಪ ॥ ಶಿರವ ಮೇಲೆತ್ತಿ ಹಿಂತಿರುಗಿ ನೋಡಿದ ರಥದಿ । ಹರಿಬಲರ ಕಾಣುತ್ತ ಸ್ಮರಿಸಿದನು ಮನದಿ ॥ ಎರಡನೆಯ ಮುಳುಗಲಾ ಸ್ಮರಪಿತನ ಕಂಡು ತನು । ಮರೆದೆದ್ದು ಮರಳಿ ಮುರಹರನನೀಕ್ಷಿಸಿ ರಥದಿ ॥ ಕಂಡನಕ್ರೂರ ॥ ೧ ॥ ಭ್ರಮೆಗೊಂಡೆನೆನುತ ಬಹು ಶ್ರಮದಿ ಮೂರನೆ ಮುಳುಗೆ । ಕ್ರಮದಿ ನೋಡಿದ ನಿಗಮಾಗಮ ಶಿರೋಮಣಿಯ ॥ ಅಮಿತ ವೈಕುಂಠದೊಳು ವಿಮಲ ಶೇಷಾಸನದಿ । ಕಮಲನಾಭನು ರಾಜಿಸುವ ಕ್ರಮ ದೊಳಿರುವವನ ॥ ಕಂಡನಕ್ರೂರ ॥ ೨ ॥ ಶತಕೋಟಿಯಜಭವರಮಿತ ಶಶಿ ದಿವಾಕರರ । ಜತೆಗೊಂಡಿರುವ ರಮಾಪತಿಯನಂತರನು ॥ ಪೃಥಿವಿ ಜಲ ಮರುತ ಪಾವಕ ಚತುರ್ದಶಭುವನ । ರತಿಪತಿಯ ಪಿತನ ರೋಮದ ಕುಳಿಯ ಮಧ್ಯದಲಿ ॥ ಕಂಡನಕ್ರೂರ ॥ ೩ ॥ ಭಜಕ ಪ್ರಹ್ಲಾದಂಬರೀಷ ವಿದುರ ಸುದಾಮ । ಭುಜಗ ಬಲಿ ಗರುಡ ಕಲಿ ಪಾರ್ಥ ಭೀಷ್ಮರನು ॥ ಸುಜನ ರುಕ್ಮಾಂಗದ ವಿಭೀಷಣರ ಸಮುದಾಯ । ಭಜಿಸಿ ಕಯ್ ಮುಗಿದು ಮನ ಸಿಜದಿ ನಿಂತಿಹ ಜನರ ॥ ಕಂಡನಕ್ರೂರ ॥ ೪ ॥ ಸುರಗಂಗೆ ಗಂಡಕಿ ಗೌತಮಿ ವಿಮಲೆ ಮಲಹರೀ । ಪರಿಪ್ರತೀ ವಾರಾಹಿ ವೈಷ್ಣವಿ ಯಮುನೆಯು ॥ ವರ ಸರಸ್ವತಿ ಭೋಗವತಿ ವಾರಣಾಸಿ ಮಿಗೆ । ಪರಿಪರಿಯ ತೀರ್ಥಗಳ ಹರಿಯ ರೋಮಾಗ್ರದಲಿ ॥ ಕಂಡನಕ್ರೂರ ॥ ೫ ॥

ಪರಿವರ್ಧಿನೀ

ಅತ್ರಿ ಮೃಕಂಡು ಪರಾಶರ ವಿಶ್ವಾ । ಮಿತ್ರ ಕಪಷ ಮುದ್ಗಲ ವೈಭಾಂಡಕ । ಪುತ್ರಾಂಗೀರಸ ಗೌತಮ ಕಾಶ್ಯಪ ಗಾರ್ಗ್ಯ ಭರದ್ವಾಜ ॥ ಉತ್ತಮ ಭೃಗು ಬಕದಾಲ್ಭ್ಯ ವಸಿಷ್ಠ ಅ । ಗಸ್ತ್ಯ ಚ್ಯವನ ಜೈಮಿನಿ ನಾರದ ಮು । ನಿಪ್ರರ ಸಮುದಾಯುನ ಕಂಡಕ್ರೂರಂ ನುತಿಗೆಯ್ದಂ ಮುದದೊಳ್ ॥ ೧ ॥

ರಾಗ ನೀಲಾಂಬರಿ ತ್ರಿವುಡೆತಾಳ

ತ್ರಾಹಿ ಶ್ರೀವರ ಕೇಶವ । ಜಯ ಜಯತು ಯದುವರ ॥ ಪ ॥ ತ್ರಾಹಿ ಕೇಶವ ತ್ರಾಹಿ ಮಾಧವ । ತ್ರಾಹಿ ಸಚರಾಚರಭರಿತ ಹರಿ ॥ ಅ ॥ ಕ್ಷೀರಸಾಗರಶಯನ । ವೈಕುಂಠವ । ತೋರಿ ರಕ್ಷಿಸಿದೆಯೆನ್ನ ॥ ಮಾರಜನಕ ಅಪಾರಮಹಿಮನೆ । ಘೋರದುರಿತಸಂಹಾರ ಕುಜನಕು । ಠಾರ ಭುವನಾ ಧಾರನಂತವ । ತಾರ ಸುಜನೋದ್ಧಾರ ಜಯ ಜಯ ॥ ತ್ರಾಹಿ ॥ ೧ ॥ ನಿನ್ನ ವಿಶ್ವಮೂರುತಿಯ । ಪ್ರತ್ಯಕ್ಷ ನಾ । ಕಣ್ಣಿಲಿ ಕಂಡೆನಯ್ಯ ॥ ಧನ್ಯ ರಾರೆನ್ನಂತೆ ಜಗದಲಿ । ಮಾನ್ಯರಾರೆಲೆ ದೇವ ಜಯತು ಕೃ । ಪಾರ್ಣವನೆ ಜಯ ಜಯ ಜಗನ್ಮಯ । ಎನ್ನ ಸಲಹೊ ಗೋವಿಂದ ಜಯ ಜಯ ॥ ತ್ರಾಹಿ ॥ ॥ ೨ ॥ ಇಂತು ಅಕ್ರೂರ ಭಕ್ತಿಯೊಳು । ಸ್ತುತಿಸಿರಲು ಶ್ರೀ । ಕಾಂತ ಕಾಳಿಂದಿ ಯೊಳು ॥ ಅಂತರ್ಧಾನವಾಗುತಲಿ ನಡೆಯುಲ । ನಂತಶಾಯಿಯ ಕಾಣದಿರಲು ಮ । ಹಾಂತ ಭ್ರಮೆಯಲಿ ನೀರಿನೊಳು ತಾ । ನಿಂತು ಹುಡುಕುತ ಹುಡುಕಿ ಮರುಗಿದ ॥ ತ್ರಾಹಿ ॥ ೩ ॥

ರಾಗ ಆನಂದಭೈರವಿ ಆದಿತಾಳ

ಹರಿ ನಿನ್ನ ಮೂರುತಿಯ । ಭರದೊಳೆನಗೆ ತೋರಿ ॥ ಮರಳಿ ಸರಿವು ದಿದುವೆ ನಿನಗೆ । ಸರಿಯೆ ಕೇಳ್ ಮುರಾರಿ ॥ ೧ ॥ ಶ್ರುತಿಗಳಿಗಗಮ್ಯವಾದಾ । ಕೃತಿಯ ತೋರಿ ಪೋದೆ ॥ ಗತಿಯಿನ್ನಾರು ದೇವ ಲಕ್ಷ್ಮೀ । ಪತಿಯೆನ್ನಗಲ ಬಹುದೆ ॥ ೨ ॥ ಕರ್ಮಿಯು ನಾನೆಂದು ಪರ । ಬ್ರಹ್ಮಯೆನ್ನಗಲಿದೆಯ ॥ ದಮ್ಮಯ್ಯ ತೋರೆನ್ನಕ್ಷಿಗಿ । ನ್ನೊಮ್ಮೆ ವಿಶ್ವಾಕೃತಿಯ ॥ ೩ ॥ ಶರಣರ ಬಂಧು ವೆಂದೆಂಬ । ಬಿರುದುಂಟಾದರೆನ್ನ ॥ ಪೊರೆಯೊ ಲಕ್ಷ್ಮೀವರನೆ ಹಾಯೆಂ । ದೊರಲ್ದ ನೀರೊಳ್ ಮುನ್ನ ॥ ೪ ॥

ಭಾಮಿನಿ

ಅರಸ ಕೇಳಕ್ರೂರನಚ್ಯುತ । ನಿರವನಾ ಜಲದೊಳಗೆ ಕಾಣದೆ । ಹೊರಳುತಿದ್ದನು ಕೃಷ್ಣ ಕೃಷ್ಣ ಕೃಪಾಕರನೆಯೆನುತ ॥ ತಿರುಗಿ ಹರಿಬಲರುಗಳು ರಥದೊಳ । ಗಿರಲು ಕಾಣುತ ಪರಮ ಹರುಷಾಂ । ಕುರಿತಪುಳಕಿತನಾಗುತವ ರೆಡೆಗಾಗಿ ನಡೆತಂದ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಧರಣೀಶ ಕೇಳು ಶ್ರೀವರನ ಕಂಡಕ್ರೂರ । ಶಿರವ ಬಾಗುತ್ತ ಬಂದು ॥ ಮರುಗುತ್ತ ಭ್ರಮೆಯೊಳತ್ತಿತ್ತ ನೋಡಿದನು ಶ್ರೀ । ಹರಿಯು ದೂರವಲಿ

ನಿಂದು ॥ ೧ ॥ ಬೆದರಿ ನ್ಯಾಲ್ಬೆಸೆಯ ನೋಡಲು ಕೃಷ್ಣ ತನ್ನಯ । ಇದಿರಿಗೆ ಕರೆ
ದೆಂದನು ॥ ಚದುರನೆ ಹೊಲಬುದಪ್ಪಿದವನಂತೇಕೆನ್ನ । ಮುದದಿ ನೋಡು
ವೆಯ ನೀನು ॥ ೨ ॥ ಕರುಣಾಬ್ಧಿ ಕೇಳು ನೀನಿರುವ ವೈಕುಂಠದ । ಸಿರಿಯ
ನೀರೊಳು ತೋರಿದೆ ॥ ಮರಳಿ ಶೋಧಿಸಲು ಕಾಣಿಸದಾದೆ ಭ್ರಮೆಯೊಳ್
ನಾ । ಕರಗಿ ನಿನ್ನನು ನೋಡಿದೆ ॥ ೩ ॥ ಬ್ರಹ್ಮರುದ್ರಾದಿ ದೇವತೆಯರ ನಯ
ನಕ । ಗಮ್ಯವಾದಾಕೃತಿಯ ॥ ನೊಮ್ಮೆ ನೀನೆನಗೆ ಕಾಣಿಸುತಗಲಿದೆ ಪರ ।
ಬ್ರಹ್ಮ ನೀ ದಿಟವು ಜೀಯ ॥ ೪ ॥ ಎಣಿಸಲೀಸರುಹು ಬ್ರಹ್ಮಾಂಡವೇ
ರೋಮದ । ಕುಣಿಯೊಳು ತೋರಿಸುತ ॥ ಜುಣುಗಲುಚಿತವೆ ಗೋವಿಂದ ನೀ
ನೆನ್ನುವ । ಗುಣವ ನೋಡುವರೆ ದಾತೆ ॥ ೫ ॥ ಅಖಿಳ ಬ್ರಹ್ಮಾಂಡನಾಯಕ
ನಿನ್ನನೀಕ್ಷಿಪ । ಶಕುತನೆ ಜಗದಿ ನಾನು ॥ ಸಕಲಂತರ್ಯಾಮಿ ರಕ್ಷಿಸು ಕೃಷ್ಣ
ನಿನ್ನಯ । ಭಕುತಿಯುತ್ತೆನಗೆ ನೀನು ॥ ೬ ॥

ಭಾಮಿನಿ

ಎನಲು ನಗುತಪ್ಪಿದನು ಕರುಣಾ । ವನಧಿ ರಥದೊಳು ಕುಳ್ಳಿರಿಸಿ
ಕೊಂ । ಡನುಪಮಾನಂದಾಬ್ಧಿಯೊಳಗೋಲಾಡುತಿರೆ ನೋಡಿ ॥ ಅನುಪಮನೆ
ನಡೆ ರಥದಿ ನಿನಗೇ । ಕೆನಿತು ಕೌತುಕಬುದ್ಧಿ ಬಮುಯೆಂ । ದೆನುತ ಬೋಳ
ಯಿಸಿದನು ನಿಜಭಕುತನನು ಮೆಯ್ಪುಡವಿ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಧರಣಿಪತಿಯ ಲಾಲಿಸಯ್ಯ । ಹರಿಯು ದಯದೊಳಭಯವನ್ನು ।
ಶರಣಗಿತ್ತು ನಡೆದ ಮುಂದೆ । ಭರದಿ ಮಥುರೆಗೆ ॥ ಪುರದ ಬಾಗಿಲೊಳಗೆ
ನಿಂದು । ಕರವ ಮುಗಿದು ಭಕುತನೊಡನೆ । ಸರಸದಿಂದ ನುಡಿದ ಜಗದೋ ।
ದ್ಧರನು ಕರುಣದಿ ॥ ೧ ॥ ರವಿಯು ಪಶ್ಚಿಮಾಬ್ಧಿಗಿಳಿದ । ಕವಿವ ಕತ್ತಲೆ
ಯೊಳು ನಡೆಯೆ । ತವ ಗೃಹಕ್ಕೆ ಪೋಗು ನೀನು । ಜವದಿ ರಥದೊಳು ॥
ನಿವಹಸಹಿತಲಿದ್ದು ನಾಳೆ । ದಿನದಿ ಬರುವೆ ನಾನು ರಾಜ । ಭವನಕೆಂದು
ನುಡಿದ ಯಾ । ದವಗೆ ಕೃಷ್ಣನು ॥ ೨ ॥ ಒಡನೆ ಕೃಷ್ಣ ನುಡಿಯಲಾಗ ।
ಬಿಡದೆಯವನ ಚರಣವೆರಡ । ಪಿಡಿದು ಬೇಡಿಕೊಂಡ ದೈನ್ಯ । ವಡುತ
ಭಕುತನು ॥ ಒಡೆಯ ನಿನ್ನ ಬಿಡೆನು ಮನೆಗೆ । ನ್ನೊಡನೆ ಕೂಡಿ ಬರಲುಯೆನ್ನ ।
ಮಡದಿ ಮಕ್ಕಳನ್ನು ಸಹಿತ । ಅಡಿಗೆ ನಮಿಪೆನು ॥ ೩ ॥ ತಡೆಯದೆರಡು
ಅಂಘ್ರಿಗಳನು । ತೊಳೆದು ಕುಡುತೆ ತೀರ್ಥವನ್ನು । ಕುಡಿದು ಮುಕ್ತಿಪಡೆವೆ

ನೆಂದ । ನುಡಿಯು ಕೇಳುತ ॥ ತಡೆಯುದೆದ್ದಪ್ಪುತ್ತ ಮೆಯ್ಯ । ತಡವರಿಸುತ ಹರಿಯು ದಯದಿ । ಒಡಃ:ಡಿಸುತ ಕಳುಹಿಸಿದನು । ಬಿಡದೆ ಶರಣನ ॥ ೪ ॥

ಭಾಮಿನಿ

ಪೊಡವಿಪತಿ ಕೇಳೈ ಮುರಾಂತಕ । ನೊಡನೆ ನೇಮವ ಕೊಳುತ ಶರಣನು । ನಡೆಯಲಿತ್ತುದಯಾಚಲಕ್ಕಡರುತಲಿ ರವಿ ಮೆರೆದ ॥ ಒಡನೆ ಕೆಳೆಯರುಸಹಿತ ಮಥುರೆಗೆ । ನಡೆದು ಪುರಬೀದಿಯೊಳು ಬರುತಿರೆ । ಕಡು ಕಠಿನ ರಜಕನನು ಕಾಣುತ ನುಡಿಸಿದನು ಹರಿಯು ॥ ೧ ॥

ರಾಗ ಮಧುಮಾಧವಿ ಏಕತಾಳ

ಆರೆಲೊ ರಜಕ ನೀ ಕೇಳೆನ್ನ ಮಾತ । ಕಾರಿಯವೊಂದುಂಟು ಪೇಳ್ವೆ ನೋಡಿತ್ತ ॥ ಚಾರು ವಸ್ತ್ರಗಳೆಲ್ಲ ತಂದೀವುದೆಮಗೆ । ಭೋರನೆ ಗಮಿಸುವೆ ಮತ್ತಾವ ಕಡೆಗೆ ॥ ೧ ॥

ರಾಗ ಭೈರವಿ ಅಷ್ಟತಾಳ

ನುಡಿಯ ಕೇಳ್ದಿಂದ ನೀನುಡುವ ವಸ್ತ್ರಗಳೆನ್ನ । ಕಡೆಯೊಳಿಲ್ಲವೊ ಮಾರ್ಗದಿ ॥ ಹುಡುಕಿ ನೀ ಸಂದುಗೊಂದಿಲಿ ಕಂಡುದನುಟ್ಟು । ಬೆಡಗಿನೊಳ್ ನಡೆ ಮುದದಿ ॥ ಅಡವಿಯರಣ್ಯವ ಬಿಡದೆ ಸಂಚರಿಸುವ । ಬಡವರು ಬಯಸಿ ನೀವು । ತೊಡಲುಚಿತವೆಯೆಮ್ಮ ಒಡೆಯ ಕಂಸನದು ಈ । ಮಡಿಯ ಕೊಡೆವು ನಾವು ॥ ೧ ॥

ರಾಗ ಮಧುಮಾಧವಿ ಏಕತಾಳ

ಖಳರಾಜ ರಜಕ ಕೇಳ್ ತಿಳಿಯದು ನಿನಗೆ । ಅಳಿಯಂದಿರರು ನಾವ್ ನಿನ್ನಿಳೆಯಪಾಲಕಗೆ ॥ ತಳುವದೆ ಮಡಿಯ ವಸ್ತ್ರವನೀಯದಿರಲು । ಸೆಳೆದು ಕೊಂಬೆವು ನಾವು ಉಳಿಸೆವೆಂದೆನಲು ॥ ೧ ॥

ರಾಗ ಭೈರವಿ ಅಷ್ಟತಾಳ

ತಡೆದು ಕೇಳುವೆಯ ನೀ ಮಡಿವಸನಗಳ ಇ । ದಡವಿಯಲ್ಲವೊ ಬೀದಿಯು ॥ ತಡೆಯದೆ ರಾಜದ್ವಾರವ ಕಾಣಿಸುವೆ ನಿನ್ನ । ಹುಡುಗಾಟ ಬಿಡು ಬುದ್ಧಿಯ ॥ ಪೊಡವಿಪಾಲಕ ನಿಮ್ಮ ಪಿಡಿದೊಯ್ದು ಅಳಿಯರಿಂ । ಗುಡು ಗೊರೆಯಿಾವ ನಿಮ್ಮ ॥ ಅಡಿಗಳಿಗವಚಿ ಸಂಕಲೆ ಸಿಕ್ಕಿಸವೆ ಬಿಡ । ಕೆಡಬೇಡ ಕೆಣಕಿಯೆಮ್ಮ ॥ ೧ ॥

ರಾಗ ಮಧುಮಾಧವಿ ಏಕತಾಳ

ಲೇಸನಾಡಿದೆ ರಾಜರಜಕ ವಸ್ತ್ರವನು । ಲೇಸಿನೊಳೆಮಗೀಯೆ ಲೇಸ ಪಾಲಿಪೆನು ॥ ಘಾಸಿಯಾಗುವೆಯಲ್ಲದಿರೆ ನೀ ಕೇಳೆನುತ । ಕೇಶಿದ್ವೇಷಿಯು ಪೇಳ್ದ ದೋಷಿಗೆ ನಗುತ ॥ ೧ ॥

ರಾಗ ಭೈರವಿ ಅಷ್ಟತಾಳ

ಬರಿದೆ ಬಾಯಿಬಡಿಕತನದಲಿ ಸಾಯ್ವಿರಿ ವ್ಯರ್ಥ । ತೆರಳಿ ಮಾರ್ಗ ದೊಳೆನುತ್ತ ॥ ಮುರುಹಿ ಮೀಸೆಯ ಕಣ್ಣ ತಿರುಹಿ ಝೋಂಕರಿಸಿ ಮುಂ । ಬರಿ ದನು ಜವದೊಳಾತ ॥ ತರಣಿಜನಿರುವ ಮಂದಿರಕೆ ಪೋಪಂದದಿ । ತ್ವರಿತದಿ ನಡೆಯಲಾತ ॥ ಹರಿ ತನ್ನ ಕೆಳೆಯರೊಳರುಹುತಣ್ಣನ ಮೊಗ । ವಿರದೆ ನೋಡಿದನು ಬೇಗ ॥ ೧ ॥

ರಾಗ ಭೈರವಿ ಏಕತಾಳ

ಎನುತ ರಜಕ ಗರ್ವದಲಿ । ಮುಂ । ಬರಿಯಲು ಹರಿಯು ಬೇಗದಲಿ ॥ ಘನತರ ವಸನ ಮೇಲೆತ್ತಿ । ಕೊಂ । ಡನುಪಮ ನಡೆದ ಬೆಂಬತ್ತಿ ॥ ೧ ॥ ಅಟ್ಟುತ ಶ್ರೀಹರಿ ರಜಕನ । ತಾ । ಮುಟ್ಟಿವಿಸುತ ಹಿಡಿದವನ ॥ ಸೃಷ್ಟಿಯೊಳಡ ಗೆಡೆವುತ್ತ । ಎದೆ । ಮೆಟ್ಟುತಡರಿ ನಲಿವುತ್ತ ॥ ೨ ॥ ಜಗದಾಧಾರನುಗುರೊಳು । ಶಿರ । ಚಿಗುಟಲು ರಜಕ ಭೂಮಿಯೊಳು ॥ ನಿಗುರುತಟ್ಟೆಯು ಸಹ ಬೀಳೆ । ಜನ । ನಗುತ ಸಂತೋಷವ ತಾಳೆ ॥ ೩ ॥ ಸಂಗಡಿಗರು ಬಿಟ್ಟೋಡೆ । ಬಲ । ರಂಗನು ಸಹಿತಲಿ ನೋಡೆ ॥ ಹಿಂಗದೆ ವಸನ ಗಂಟೊಡೆದ । ಗೋಪ । ರಿಂಗೀವುತ ಮುಂದೆ ನಡೆದ ॥ ೪ ॥ ಒಪ್ಪಿ ಮುಂಬರಿಯಲು ಹರಿಯು । ಒಬ್ಬ । ಚಿಪ್ಪಿಗನೆರಡಂಗಿಕೆಯ ॥ ಒಪ್ಪಿಸಿ ಪದಕೆರಗುತ್ತ । ನ । ಮ್ಮಪ್ಪನೆ ತೆಗೆದು ಕೊಳ್ಳೆನುತ ॥ ೫ ॥ ನುತಿಸಲು ಸಾಯುಜ್ಯವನು । ಇ । ತ್ತತಿಸಂಪದ ಭಾಗ್ಯ ವನು ॥ ಸತಿಸುತರಿಗೆ ಸಹವಿತ್ತು । ಮುರ । ಮಥನ ಮುಂದರಿದನು ಮತ್ತು ॥ ೬ ॥

ದ್ವಿಪದಿ

ಎಲೆ ಪರೀಕ್ಷಿತ ಕೇಳು ಚೆಲುವ ಹರಿ ದಯದಿ । ಒಲಿದು ಸಾಯುಜ್ಯ ಚಿಂಪಿಗಗಿತ್ತು ಪಥದಿ ॥ ೧ ॥ ಗೆಲವಿನಲಿ ಬರೆ ಪುರದ ಸಿಳೆಯಲಕ್ಷ್ಮಿಯನು । ತಳುವದೀಕ್ಷಿಸಿದ ಪರಿಯೇನನುಸಿರುವೆನು ॥ ೨ ॥ ಕೇರಿ ಕೇರಿಯನು ಹಲ ಧರನು ಗೋಪಳಗೆ । ತೋರಿಸುತ ಮುಂದೆ ಬಂದನು ಬೀದಿಯೊಳಗೆ ॥ ೩ ॥ ಮಹಾವುತರ ಕುದುರೆ ರಾವುತರ ಕೇರಿಗಳ । ಸಾಮಂತರರಮನೆಯ ಜೇವಿನವರು

ಗಳ ॥ ೪ ॥ ಪಾಠಕರ ಮಲ್ಲರರಸುನೆಯ ಕೇರಿಯನು । ಈಟುಗಾರ್ತಿಯರ ದೇಶಿಯರ ಕೇರಿಯನು ॥ ೫ ॥ ದಾಟಿ ಬರೆ ಮನೆಮನೆ ಕವಾಟದಲಿ ಜನರು । ನೋಟದಲಿ ಈಕ್ಷಿಸುತ ತನುವ ಮರೆದವರು ॥ ೬ ॥ ಲೀಲೆಯಲಿ ಮಾಧವನು ಮುಂದೆ ಬರಲಿತ್ತ । ಮಾಲೆಗಾರ ಸುದಾಮ ಬರವ ಕಾಣುತ್ತ ॥ ೭ ॥ ಆದಿ ಮಧ್ಯಾಂತರಹಿತನನು ದೂರದಲಿ । ಮೋದದಲಿ ಕಂಡಿದಿರು ಬಂದ ಬೀದಿ ಯಲಿ ॥ ೮ ॥

ಭಾಮಿನಿ

ಅರಸ ಕೇಳೈ ರಾಮಕೃಷ್ಣರ । ಬರವ ಕಾಣುತ ಪರಮ ಹರುಷಾಂ । ಕುರಿತಪುಳಕಿತಗಾತ್ರನಂಘ್ರಿಸರೋಜಯುಗಳದಲಿ ॥ ಶಿರವೆರಗಿ ಕಯ್‌ಗೊಟ್ಟು ನಿಜಮಂ । ದಿರಕೆ ಬಿಜಯಂಗೆಯ್ಸಿ ತಂದಾ । ದರದಲಾರಾಧಿಸಿದನಂದು ಸುದಾಮನೊಲವಿನಲಿ ॥ ೧ ॥

ರಾಗ ಕಲ್ಯಾಣಿ ಆದಿತಾಳ

ನೋಡಿ ಹರಿಯ ಕೊಂಡಾಡಿ । ಒಡಲನೀ । ಡಾಡಿ ಸ್ತುತಿಯ ಮಾಡಿ ॥ ನೋಡಿ ಪಾಡಿ ಕರಜೋಡಿಸಿ ದೈನ್ಯದಿ । ಬೇಡಿ ಗೃಹಕೆ ತಂದಾಡುತರ್ಚಿಸುತಲಿ ॥ ॥ ಪ ॥ ತಡೆಯದೆ ಸುದಾಮ ಮೂರ್ಜಗ । ದೊಡೆಯಗೆ ರತ್ನಾಸನವಡರಿಸಿ । ಬಿಡದೆ ಪಿಡಿದೆರಡಡಿಗಳ ತಾ ಪಡಿಗದಿಯಡುತಾಗ ॥ ಕಡುಬೆಡಗಿಲಿ ಜಲವ ತಂದೊಡ। ನೊಡನೆ ತೊಳೆದು ಪಾದತೀರ್ಥವ। ಕುಡುತೆಕುಡುತೆಯಲಿ ಕುಡಿವುತ ಬಾಂಧವ । ಮಡದಿ ಮಕ್ಕಳಿಗೆ ತಾ ಕೊಡುಕೊಡುತಾಡುತ್ತ ॥ ನೋಡಿ ॥ ೧ ॥ ತರಿಸುತ ಮೊಲ್ಲೆ ಮಲ್ಲಿಗೆಯುರಳುತಲಿಹ ಜಾಜಿ । ಸುರಗಿ ಬೆರೆಸುತ ಶ್ರೀತುಳ ಸಿಯ ಮಾಲೆ ಕಟ್ಟಿರಿಸುತ ಮುಂದಿಟ್ಟು ॥ ಪರಿಪರಿಯಲಿ ಬೇಡಿಕೊಳುತರ್ಪಿಸಿ ನೋಡಿ ಜೇಗದಿ ಶರಣಸುದಾಮನು । ತರುಣಿತರುಣಜನವೆರಸಿ ಬಂದಘ್ರಿ ಯೊಳೆರಗುತ್ತಿರಗುತಲಿ ॥ ನೋಡಿ ॥ ೨ ॥ ನುತಿಸುತ ನಿಂದಿಹ ಶರಣನ ಪಿಡಿ ದಪ್ಪುತ । ಮತಿಯುತನವಗೆಂದನು ನಿನ್ನಯ । ಅತಿಹಿತವನು ಬೇಡು ಪ್ರತಿ ಯಿಲ್ಲದೆ ಕೊಡುವೆ ॥ ನುತಿಸುತಾ ಸ್ತುತಿಯ ಕಾಣುತ ನುಡಿವೆನು ನಿನ್ನಯ । ಖತಿಯ ಬಿಡಿಸಿ ಪರಗತಿಯ ತೋರಿಪನೆನೆ । ರತಿಪತಿಪಿತಗೆರಗುತ ಶರಣ ನುಡಿದ ॥ ನೋಡಿ ॥ ೩ ॥

ರಾಗ ಕಾಂಭೋಜ ಏಕತಾಳ

ಪಾಹಿ ಪಾಹಿ ಕೇಶವ ಶ್ರೀ । ಕೃಷ್ಣ ಕೃಷ್ಣ । ದೇವ । ತ್ರಾಹಿ ತ್ರಾಹಿ ಮಾಧವ ಶ್ರೀ । ಕೃಷ್ಣ ಕೃಷ್ಣ ॥ ಪ ॥ ಅನ್ಯ ಬಯಕೆಯಿಲ್ಲವಯ್ಯ । ಕೃಷ್ಣ

ಕೃಷ್ಣ । ದೇವ । ನಿನ್ನ ಭಕುತಿಯನ್ನು ಈಯೊ । ಕೃಷ್ಣ ಕೃಷ್ಣ ॥ ಬನ್ನಬಟ್ಟೆ ಭವದೊಳಾನು । ಕೃಷ್ಣ ಕೃಷ್ಣ । ದೇವ । ಮನ್ನಿಸುತೆನ್ನನು ಸಲಹು । ಕೃಷ್ಣ ಕೃಷ್ಣ ॥ ೧ ॥ ಕರುಣಾಬ್ಧಿಯಲ್ಲವೆ ನೀನು । ಕೃಷ್ಣ ಕೃಷ್ಣ । ನಿನ್ನ । ಶರಣರ ಸಂಗವನೀಯೊ । ಕೃಷ್ಣ ಕೃಷ್ಣ । ಭರದಿಯೆನ್ನುದ್ಧರಿಸು ದೇವ । ಕೃಷ್ಣ ಕೃಷ್ಣ । ಎಂದು । ಚರಣಕೆರಗಿದನ ಸುದಾಮ । ಕೃಷ್ಣ ಕೃಷ್ಣ ॥ ೨ ॥

ಭಾಮಿನಿ

ಆಮಿತೇಳಿತ್ತೆನು ಮನೋಭಿ । ಪ್ರಾಯಸಿದ್ಧಿಯನಧಿಕವಹ ಪರ । ಮಾಯುವನು ನಿನ್ನನ್ವಯಾನುಕ್ರಮವಿವರ್ಧನವ ॥ ಶ್ರೀಯನುತ್ತಮ ಕೀರ್ತಿಯನು ಸ । ಶ್ರೀಯನವನೈಶ್ವರ್ಯಗತಿಗಳ । ನಾಯುವಂತನೆ ಕೊಟ್ಟೆನೆಂದನು ವರವನಾತಂಗೆ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಇಂತು ಸೌಭಾಗ್ಯಸಂಪದವ ಸುದಾಮನಿ । ಗಂತಕಾಂತಕನಿತ್ತು ದಯದಿ ॥ ಚಿಂತೆವಿರಹಿತನಂತಾದ್ಯರನೊಡಗೂಡಿ । ಮುಂತೆಯಲ್ಲಿಂದ ತಾ ನಡೆದ ॥ ೧ ॥ ಬರಲು ಮುಮ್ಮಾರ್ಗದಿ ತರುಣಿಯೊರ್ವಳು ಪೊನ್ನ । ಹರಿವಾಣ ತುಂಬಿ ಗಂಧವನು ॥ ಧರಿಸಿ ಬೀದಿಯೊಳು ತಾ ಬರಲು ಶ್ರೀಹರಿ ಕಂಡು । ಬೆರಗಾಗುತಲಿ ನೋಡಿದನು ॥ ೨ ॥ ಶಿರದ ತಗ್ಗೆತ್ತಿ ಮೊಗ ಮುರುಟಿ ಡೊಂಕಾಗಿ ಜೋ । ಲಿರುವ ಚರ್ಮವು ಶ್ವೇತಕೇಶ ॥ ಮೆರೆವ ಮುಪ್ಪಡರಿದಾಕೃತಿಯು ವಿಕೃತಿಯಾದ । ತರುಣಿಯನು ಕಂಡನಚ್ಯುತನು ॥ ೩ ॥ ಸರ್ವಲೋಕೇಶನಣ್ಣನ ಮೊಗವ ನೋಡುತ್ತ । ಲೊರ್ವರೊರ್ವರು ತಮ್ಮೊಳ್ ನಗುತ ॥ ಊರ್ವಿಗಿಂತವಳು ಇಲ್ಲೆಂದು ಗೋವರ್ಧನ । ಪರ್ವತಧರನು ಕಂಡೆಂದ ॥ ೪ ॥ ಮತ್ತಕಾಶಿನಿಯ ಶ್ರೀಹರಿಯು ಕಂಡಾಕೆಯು । ಪತ್ತಿರೆ ನಿಂದು ನೋಡುತಲಿ ॥ ಅತ್ಯಂತ ದಯದಿ ಮಂದಾಸ್ಯದೊಳ್ ಮೃದುವಾಕ್ಯ । ಬಿತ್ತರಿಸಿದನಾಕೆಯೊಡನೆ ॥ ೫ ॥

ರಾಗ ಸೌರಾಷ್ಟ್ರ ಏಕತಾಳ

ನಾರೀ ನಿನ್ನನು ಪೋಲ್ವ । ರಾರೀ ತ್ರೈಜಗದೊಳಿ । ನ್ನಾರ ಕಾಣೆನು ಪೇಳ್ ನೀನಾರೆ ॥ ವಾರಿಜಾಕ್ಷಿಯೆ ಚೆಲ್ವಾಕಾರಗುಂದಿರುತಿಹ । ಕಾರಣವೇನೆನ್ನೊಳುಸಿರೆ ॥ ೧ ॥ ಎನ್ನ ಕೇಳುವೆಯ ಸಂಪನ್ನ ಪೇಳುವೆ ಚೆಲ್ವ । ಕನ್ನೆಯಲ್ಲವೆ ಮುನ್ನಾನು ॥ ಬಣ್ಣಗುಂದೀಗ ತ್ರಿವಕ್ರೆಯೆಂಬಭಿದಾನ । ವನ್ನು ಪಡೆದೆ

ವಿಧಿಕೃತದಿ ॥ ೨ ॥ ನಾರಿ ಕೇಳ್ ಗಂಧವಿದಾರು ಲೇಪಿಸುವರಿ । ನ್ನಾರಿಗೊಯ್ದುಪೆಯೆ ಪೇಳೆನಗೆ ॥ ಚಾರು ಗಂಧವನು ನೀನೆಮಗೆ ಕೊಟ್ಟರೆಕ । ಯ್ಯಾರೆ ತೋರುವೆ ಶುಭೋದಯುವ ॥ ೩ ॥ ಚದುರ ಕೇಳಿದನು ಭುವ್ಯಧಿಪ ಕಂಸಾಖ್ಯಗೀ । ವಿಧದಿ ತೇದುವೆ ನಿರಂತರದಿ ॥ ಅಧಿಕ ಮೋಹದಿ ದಾಸಿಯಳಿಗೆ ನೀನೀ ಲೇಸ । ಮುದದಿ ಈಯಲು ಬ್ರಹ್ಮನೇನೈ ॥ ೪ ॥ ಇಳೆಯ ಪಾಲಕಗೆ ನಾವಳಿಯುಂದಿರರು ಕಾಣೆ । ನಳಿನಾಕ್ಷಿ ಗಂಧ ತಾರೆನಲು ॥ ಚೆಲುವ ನೀನಿರಲನ್ಯರಿಗೆ ಯೋಗ್ಯವಲ್ಲೆಂದು । ಒಲಿದು ಪಾತ್ರವೆಯಿತ್ತಳಾಗ ॥ ೫ ॥

ಭಾಮಿನಿ

ಧರಣಿಪತಿ ಕೇಳ್ ವಿಮಲಪಿಶ್ವಂ । ಭರಸು ಹರಿಯಿವನೆಂದು ತಿಳಿಯದೆ । ತರುಣಿಯಾತನ ಚೆಲುವಿಕೆಗೆ ತಾ ಮೆಚ್ಚಿ ಗಂಧವನು ॥ ಪರಮ ಹರುಷದಿ ಕೊಡಲು ಕೆಳೆಯುರ । ನೆರವಿಯಲಿಯೋಕುಳಿಯನಾಡುತ । ಕರುಣನಿಧಿ ಕುಬುಜೆಯನು ಹತ್ತಿರ ಕರೆದು ಇಂತೆಂದ ॥ ೧ ॥

ರಾಗ ಸುರುಟಿ ಏಕತಾಳ

ಮಾನಿನಿಮಣಿ ಕೇಳೆ । ನಿನ್ನನು । ಮಾನವೇನಿದು ಪೇಳೆ ॥ ನ್ಯೂನಾಕೃತಿಗೆ ನಾ । ಕಾಣಿಪೆ ಶುಭವನೀ । ಮೌನವ ಬಿಡುಯೆ । ನ್ನಾಣೆಯೆಂದರುಹಿದ ॥ ೧ ॥ ನಿನ್ನ ತೆರದೊಳಿರುವ । ಜನರಿಗೆ । ಮನ್ನಿಸಿ ರಚಿಸಿರುವ ॥ ಎನ್ನ ಪೂರ್ವಜರರಿ । ತಿರುವರು ವೈದ್ಯವ । ದನ್ನು ನಾ ಬಲ್ಲೆ ನೋ । ಡೆನ್ನ ಕಯ್ ಗುಣಗಳ ॥ ೨ ॥ ದಿಟ್ಟಿ ಬಾರೆನುತವಳ । ಕರೆವುತ । ಮೆಟ್ಟುತ ಪದಯುಗಳ ॥ ನೆಟ್ಟನೆ ಕರಯುಗ । ಗೊಟ್ಟು ಗಲ್ಲದೊಳ್ ಮೇ । ಲಷ್ಟಾಂಗುಲವನೆ । ತ್ತಿಟ್ಟ ಶ್ರೀಕೃಷ್ಣನು ॥ ೩ ॥ ನಿಟಿನಿಟಿನಿಟಿಲೆನುತ । ಸಡಲಿತು । ಕಟಿ ಎಲುನರಸಹಿತ ॥ ನಟನೆಗಾರ್ತಿಯು ತನು । ಸ್ಫಟಿಕದಂತಾಗಲು । ವಿಟರು ಕಾಣುತ ಮನ । ದಿಟದಿ ಮೆಚ್ಚುತಲಿರೆ ॥ ೪ ॥

ಭಾಮಿನಿ

ಅರಸ ಕೇಳಾ ಸತಿಯನಚ್ಯುತ । ಹರುಷದಲಿ ಮೇಲೆತ್ತುತಿರಲಾ । ತರುಣಿ ದಿವ್ಯಾಕೃತಿಯೊಳೆಸೆದಳು ಏನನುಸಿರುವೆನು ॥ ಧರೆಗೆ ರಂಭೆಯೊ ಊರ್ವಶಿಯೊ ಕಿ । ನ್ನರವಧುವೊಯೆನೆ ಮರೆದು ಶಿರವನು । ಧರೆಗೆ ಬಾಗುತ ನಾಚಿ ಹರಿಯೊಡನೆಂದಳಿಂದುಮುಖಿ ॥ ೧ ॥

ರಾಗ ಆನಂದ ಏಕತಾಳ

ಜಯತು ನನೋ । ಕರುಣನಿಧಿ । ಜಯತು ಭಾ । ಗ್ಯವಿನೋದಿ ॥ ಜಯವೆನಗಿ । ತ್ತೆಯೊ ದಯದಿ । ಜನಿಸಿದೆ ನಾ । ಭವಶರಧಿ ॥೧॥ ಇಂದೆನ್ನ ಉ । ದ್ಧರಿಸಿದಕೆ । ಚಂದದಿಯೆ । ನ್ನಯ ಗೃಹಕೆ ॥ ಬಂದೆನ್ನ । ಷ್ಟಾರ್ಥ ವನು । ಕುಂದದೆ ಪಾ । ಲಿಸು ನೀನು ॥ ೨ ॥ ಹರಣವು ಮ । ನ್ಮಥಶರಕೆ । ಕರಗುತಿದೆ । ನ್ನದು ದಿಟಕೆ ॥ ನಡೆ ಗೃಹಕೆ । ನ್ನುತ ಸೆರಗ । ಹಿಡಿದಳು ನಾ । ಚುತ ಬೇಗ ॥ ೩ ॥ ತರುಣಿಮಣೀ । ಬಾರೆನುತ । ಕರುಣಿ ಬಂದ । ಪ್ಪಿದ ನಗುತ ॥ ಮರುಗದಿರು । ಮನದೊಳಗೆ । ಬರುವೆನು ನಿ । ನ್ನಯ ಗೃಹಕೆ ॥ ॥ ೪ ॥ ಕಾರಿಯವುಂ । ಟೆನುಗಿಂದು । ತೀರಿಸುತಿ । ಲ್ಲಿಗೆ ಬಂದು ॥ ತೋರು ವೆನು । ರತಿಸುಖವ । ನಾರಿಮಣಿ । ಕೇಳ್ ದಿಟವ ॥ ೫ ॥

ದ್ವಿಪದಿ

ಕೇಳು ಭೂವರನೆ ಗೋಕುಲವಾಸಿ ಹರಿಯು । ಬಾಲೆ ಕುಬುಜೆಯು ಪಾಲಿಸಿಯೆ ಮುಂದೆ ಬರಲು ॥೧॥ ಲೋಲನೇತ್ರನ ಬರವ ಕೇಳುತಲಿ ಸತಿಯು । ಜಾಲವೆದ್ದುದು ಮರೆದು ತನ್ನುತನ್ನ ಮತಿಯು ॥ ೨ ॥

ರಾಗ ಕಾಂಭೋಜ ಅಷ್ಟತಾಳ

ಲಾಲಿಸು । ಭೂಪ । ಲಾಲಿಸು ॥ ಪ ॥ ಲಾಲಿಸಿ ಕೇಳು ಪರೀಕ್ಷಿತ । ಮಘು । ರಾಲಯದೊಳಗಜಬಜಿಪ ಆಶ್ಚರ್ಯವ ॥ ಅ ॥ ಕರುಣನಿಧಿಯು ಕೃಷ್ಣ । ಬರುವನೆನುತ ಕೇಳಿ । ತರುಣಿಯರೆಲ್ಲ ಕೂಡುತ ಬೇಗ । ತನು । ಮರೆದು ಅತ್ತಿತ್ತ ಓಡಿದರಾಗ । ತಮ್ಮ । ತರಳರ ಬಿಸುಡುತಾಕ್ಷಣ ಬೇಗ । ಕಣ್ಣಿ । ಗಿರಿಸಿದರವರು ಕುಂಕುಮವಾಗ । ಕಾಡಿಗೆಯ ಬೇಗ । ಮೂಗಿನೊಳಗಾಗ । ತುಂಬಿ । ಇರುವ ವೀಳ್ಯವ ಕಿವಿಯೊಳಗಾಗ । ಇಟ್ಟು । ಕೊರಳೊಳು ಪೂಮಾಲೆ ತೊಟ್ಟರು ಬೇಗ ॥ ೧ ॥ ಕರಗಳಿಗಿಟ್ಟು ಗೆಜ್ಜೆಯ ರತ್ನ । ಸೊಂಟಕೆ ಸುತ್ತಿ । ತಮ್ಮ । ಶಿರಕೆ ಶ್ರೀಗಂಧ ತೇಯುತ್ತ ಮೆತ್ತಿ । ಕೊಂಡು । ಚರಣಕೆ ಬಳೆಯನಿಟ್ಟರು ಮತ್ತೆ । ಗೋಡೆಗಳ ಹತ್ತಿ । ನೋಡುವರು ಆರ್ತಿ । ಕೆಲರ್ ಕರುವಿಗೆ ಮೊಲೆಯ ಕೊಟ್ಟರು ಎತ್ತಿ । ತಮ್ಮ । ಎರೆಮಾರ ಬಿಟ್ಟು ಪೋದರು ಮುತ್ತಿ ॥ ೨ ॥ ಹರಿಯ ನೋಳ್ಪರ್ತಿಯೊಳಿರವೆ । ಎಣ್ಣೆಯನಿಟ್ಟು । ತರುಣಿಯರ್ ಸ್ನಾನಮಾಡದೆ ಬಂದು । ಉಣು । ತಿರುವ ಬಟ್ಟಲ ಬೀಸಾಡಿದರಂದು । ತಾವು । ಮರುಳರಂತೆ ಬೀದಿಯೊಳ್ ನಿಂದು । ಕೆಲ । ರಿರವೆ ಹತ್ತಿದರು

ಮಾಳಿಗೆಯಿಂದು । ನೋಡಿದರು ಬಂದು । ಕೃಷ್ಣನ ನಿಂದು । ಕಂಡು । ಮರುಳಾದ ಪರಿಯ ನಾನೇನೆಂದು । ಪೇಳ್ವೆ । ಹರಿಯ ನಾಟಕವ ನೀ ಕೇಳೆಂದು ॥ ೩ ॥

ಕಂದ

ಇಂತಾ ಸತಿಯರು ನೋಡುತ । ಕಂತುವಿಗಂಗವನೊಪ್ಪಿಸಿ ತತ್‌ಕ್ಷಣ ದೊಳಗಂ ॥ ನಿಂತುಪ್ಪರಿಗೆಯೊಳ್ ಕೃಷ್ಣನ । ತಂತಮ್ಮೊಳಗೊರ್ವರೊರ್ವರ್ ಬೆಸಗೊಳುತಿರ್ದರ್ ॥ ೧ ॥

ರಾಗ ತುಜಾವಂತು ಏಕತಾಳೆ

ಚಂದ್ರಾನನೆ ಬಾ ನೋಡೆಲೆ ನೀರೆ । ಗೋಪ । ವೃಂದ ನೆರಹಿ ಬಂದ ನಿವನಾರೆ ॥ ಚಂದ್ರಾನನೆ ॥ ಪ ॥ ತರಣಿಶತಕೋಟಿಪ್ರಭೆಯ ಪೋಲುವ । ಮೆರೆ । ದಿರುವ ದಿವಾಕೃತಿಯಾನನವ ॥ ಪರಿಯ ಕಾಣಲು ಭ್ರಮೆಯನು ತೋರುವ । ನಿವ । ನಿರವನೀಕ್ಷಿಸುತೆನ್ನೊಳರುಹೆಯವ್ವ ॥ ೧ ॥ ನಾರಿ ಕೇಳಜ ಭವಾದ್ಯರು ಪೂರ್ವದಿ । ಪೇಳೆ । ಕ್ಷೀರಸಾಗರಶಯನ ವಿನೋದದಿ ॥ ತೋರೆ ನಾಟಕ ಉದ್ಭವಿಸೆ ಮುದದಿ । ಆದಿ । ನಾರಾಯಣನಂತಿವನು ಜಗದಿ ॥ ೨ ॥ ಕರುಣಾಬ್ಧಿಯಿವನೆಂದಾಡಿದೆಯೆನ್ನೊಳು । ಈತ । ನಿರುವನಿಲ್ಲೆಂದು ಕೇಳುವೆ ನಿನ್ನೊಳು ॥ ಅರಿವೆ ಪೇಳಿವನ ನಿಶ್ಚಯವಮ್ಮ । ಕಾಮು । ಶರಕೆ ಸೋತೆನು ದಮ್ಮಯ್ಯ ಕಾಣಮ್ಮ ॥ ೩ ॥ ಮುಂದಗಮನೆ ಕೇಳಾದರೆ ಈತನು । ಪೋಗೆ । ನಂದನ ಸದನದಿ ಗೋವ್ಗಳನು ॥ ಚಂದದಿ ಕಾಯ್ದು ಶ್ರೀಹರಿಯು ತಾನೆ । ಆ । ನಂದದಿ ನೆರೆದ ಗೋವಿಂದ ಕಾಣೆ ॥ ೪ ॥ ಅಧಿಕ ಕೋಟ್ಯಾನುಕೋಟಿ ಯಜಾಂಡವ । ತ । ನ್ನುದರದಿ ಪುಡಗಿಸಿಟ್ಟ ಈ ಮಾಧವ ॥ ಮುದದಿ ನಮ್ಮನು ಈತ ರಮಿಸಲಮ್ಮ । ನಮ । ಗಿದಿರ್ಯಾರು ಭಾಗ್ಯಸಂಪದದೊಳಮ್ಮ ॥ ೫ ॥

ಭಾಮಿನಿ

ಜನಪ ಕೇಳ್ಮೈ ಮಧುರೆಯೊಳಗಿಹ । ಜನರ ಭಾಗ್ಯವನೇನನೆಂಬೆನು । ಜನುನು ಸಾರ್ಥಕಗೆಯ್ದುರಲ್ಲೇ ಹರಿಯ ದರುಶನದಿ ॥ ಇನಿತು ಪುಣ್ಯೋದ ಯವು ಸನಕಾ । ದ್ಯರಿಗಸಾಧ್ಯವು ಭೂಪ ಕೇಳ್ಮೈ । ವನಿತೆಯರು ಆರತಿಯ ಬೆಳಗುತಲಾಡಿ ಪಾಡಿದರು ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಮಂಗಲಂ ಶ್ರೀಕೃಷ್ಣರಾಯನಿಗೆ । ಜಯ । ಮಂಗಲಂ ಜಯತು ಶ್ರೀಮಾಧವನಗೆ । ಮಂಗಲಂ ॥ ಪ ॥ ಸರಸಿಜಭವ ಮುಖ್ಯ ಸುರರು ಕ್ಷೀರಾ

ಬ್ಧಿಗೆ । ತೆರಳಿ ದೈತ್ಯರ ಉಪಟಳವೆಲ್ಲವ ॥ ಅರಿಕೆ ಗೆಯ್ಯೆ ದೇವಕಿಯುದರ ದೊಳವ । ತರಿಸಿದ ಮಹಿಮಗಾರತಿಯೆತ್ತಿರೆ ॥ ಮಂಗಲಂ ॥ ೧ ॥ ಶಕಟ ಪೂತನಿ ವಾತಾಸುರ ಮುಖ್ಯ ಧೇನುಕ । ಬಕಕೇಶಿ ವೃಷಭಾದ್ಯರ ದ್ವೇಷದಿ ॥ ಸಕಲರ ತರಿದು ಗೋಕುಲದಿ ಗೋವಿಂಡನು । ಯುಕುತದಿ ಕಾದ ನಾಟಕ ಧಾರಿಗೆ ॥ ಮಂಗಲಂ ॥ ೨ ॥ ಶ್ರುತಿಯ ಕಾಯ್ದದ್ರಿಯೆತ್ತ್ಯವನಿತಂದರ್ಭಕ । ಗತಿಯಿತ್ತು ಬಲಿಯ ಮೆಟ್ಟುತ ಕ್ಷತ್ರರ ॥ ಮಥಿಸಿ ವಾಲಿಯ ಕೊಂದು ಬೆಣ್ಣೆ ಕದ್ದು ಸ್ತ್ರೀಯರ । ವ್ರತ ಗೆಲ್ದ ಕಲ್ಕ್ಯಮಹಾನುಭಾವಗೆ ॥ ಮಂಗಲಂ ॥ ೩ ॥

ಮೊದಲನೆಯ ಸಂಧಿ ಮುಗಿದುದು

ಎರಡನೆಯ ಸಂಧಿ: ಕಂಸವಧೆ

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಂತು ಹರುಷಂಗಳಲಿ ಸ್ತ್ರೀಯರು । ನಿಂತು ಆರತಿ ಬೆಳಗುತಿರಲಾ । ಕಂತುಜನಕನು ಕೆಳೆಯರೊಡನಾ । ಮುಂತೆ ನಡೆದ ॥ ೧ ॥ ಬರಬರಲು ಧನುವಿರುವ ಭವನಕೆ । ಅರಿತು ಬಂದರು ದ್ವಾರದೊಳು ಮುಂ । ದಿರುವ ಕಾಪಿನ ಭಟರ ಕಂಡರು । ಹಿದನು ದಯದಿ ॥ ೨ ॥ ಬಿಲ್ಲಹಬ್ಬವು ಗಡ ಮಹಾಧನು । ವೆಲ್ಲಿ ತೋರಿದಡರಿಯಬಹುದೆನು । ತಲ್ಲಿರುವ ಖಳರೊಡನೆ ಲಕ್ಷ್ಮೀ । ನಲ್ಲ ನುಡಿದ ॥ ೩ ॥ ತಡೆದ ಕಾಪಿನ ಭಟರ ಕರಗಳ । ಹಿಡಿದು ಅವರೊಡಗೂಡಿ ಒಳಪೊ । ಕ್ಕೊಡನೆ ಹಲಧರ ಸಹಿತ ಧನುವಿ । ದ್ದೆಡೆಗೆ ಬಂದು ॥ ೪ ॥ ಆ ಮಹಾ ಕೋದಂಡದಿದಿರೊಳು । ಕಾಮಜನಕನು ಸಹಿತ ಕೆಳೆಯರ । ಸ್ತೋಮಕರುಹಿಸುತೆಂದನಾ ಬಲ । ರಾಮನೊಡನೆ ॥ ೫ ॥

ರಾಗ ವೃಂದಾವನ ಸಾರಂಗ ತ್ರಿವುಡೆತಾಳ

ಕೇಳಿ ಗೋವಳರೆಲ್ಲ । ಎನ್ನಣ್ಣ ಕೃ । ಪಾಳು ಕೇಳೆನ್ನ ಸೊಲ್ಲ । ಸಂತೋಷವ । ತಾಳಿ ನೋಡಿರಿ ಈ ಬಿಲ್ಲ । ಪಿಡಿದ ಮಹಾತ್ಮನ ॥ ತೋಳ ಬಲವೇನವುವು ಶಕ್ತಿ ಕ । ಪಾಲಧರನೇ ಬಲ್ಲ ನಾವಿದ । ಕೇಳಿ ಕರ್ಣೇಂ ದ್ರಿಯದ ದುಷ್ಕೃತ । ಕೋಳು ಹೋದದು ನಮಗೆ ದಿನ ದಿನ ॥ ೧ ॥ ಭರದೊಳೆಮ್ಮಾಂಸಕ್ಷಿಗೆ । ಗೋಚರಿಸಿತೀ । ಮೆರೆವ ಕಾರ್ಮುಕವೆಮಗೆ । ನಮ್ಮಂತೆ ಧನ್ಯ । ರಿರುವರೇ ಜಗದೊಳಗೆ । ನೋಡಿರಿ ಫಳಿಗೆ ॥ ಕರವ ಮುಟ್ಟಿಸಿ ಸಫಲ ಮಾಡದೆ । ಇರೆನು ನೋಡಾಯೆನುತ ತಾನೆಡ । ಕರದಲೆತ್ತಿದ ಧನುವ ಮಂದರ । ಗಿರಿಯನೆತ್ತುವವೋಲ್ ಮುರಾರಿಯು ॥ ೨ ॥ ಮೆರೆವ ಕೋದಂಡವನು । ಎತ್ತುತಲಿ ಶ್ರೀ । ಹರಿಯು ಬಗ್ಗಿಸುತದನು । ತಿಬ್ಬೇರಿಸಿ । ಕರದಿ ಝೇಂಕರಿಸಿದನು । ಇಕ್ಕಡಿಯ ಗೆಯ್ದನು ॥ ಭರದಿ ಬ್ರಹ್ಮಾಂಡವನು ಒಡೆವಂ । ತಿರೆ ಸಘಾಡದಿ ಶಬ್ದಮಾಗಿರೆ । ಯುರುಳಿ ಗದ್ದುಗೆಯಿಂದ ಕಂಸನು । ಧರೆಗೆ ಬಿದ್ದನು ನಡುಗಿದುದು ಸಭೆ ॥ ಕೇಳಿ ॥ ೩ ॥

ಭಾಮಿನಿ

ಪೊಡವಿಯಧಿಪತಿ ಕೇಳು ಖರ್ಪರ । ವೊಡೆದುದೋಹೊ ಕುಲಾದ್ರಿ ಕಡಲೊಳು । ಸಿಡಿದು ಕೆಡದುದೊಯೆಂಬ ತೆರನಂತಾಗೆ ಧನು ಮುರಿಯೆ ॥

ನೃಪಸರೋಜಜರೊಡಲು ಕಂಪಿಸ । ಲೊಡನೆಯಿತ್ತಲು ಬಿಡದೆ ಹರಿಯುಸು । ತಡೆದು ಬಾಗಿಲನೆಡೆಬಿಡದೆ ನಿಂದಿರ್ದರಾ ಖಳರು ॥ ೧ ॥

ರಾಗ ಮಾರವಿ ಏಕತಾಳ

ಈ ಪರಿಯೊಳು ಧನು ಮುರಿಯಲು ಖಳತತಿ । ಕೋಪದಿ ಹಿಡಿದೆಳೆಯೆ ॥ ಶ್ರೀಪತಿಯುದನು ಕಂಡಾ ಬಲರಾಮಗೆ । ಚಾಪದ ಕಡಿಯಿರಾಯೆ ॥ ೧ ॥ ಹರಿಬಲರರ್ಧರ್ಧದ ಇಕ್ಕಡಿಗಳ । ಧರಿಸಿ ಬಾಗಿಲ ತಡೆವ ॥ ದುರುಳರ ನೆರವಿಯು ಹೊಯ್ಯುತ ಕೆಡಹಿದ । ರುರುವ ಖಳರ ಶಿರವ ॥ ೨ ॥ ಹಿಡಿ ಹಿಡಿ ಬಿಡದಿರಿ ಕಡಿ ಕಡಿಯೆಂದಡಿ । ಗಡಿಗೆ ಗರ್ಜಿಸಿ ಖಳರು ॥ ನುಡಿಯಲು ಹರಿ ತಡೆತಡೆದು ಬಡೆಯೆ ಹಿಡಿ । ಹಿಡಿದು ಬಿದ್ದರು ಭಟರು ॥ ೩ ॥ ಘಸಣಿಸುತಸುರರ ಮುಸುಡನು ಹೊಯ್ಯಲು । ಕುಸುರಿ ನರಗಳೊಡೆಯೆ ॥ ಬಿಸಿ ಬಿಸಿ ನೆತ್ತರು ಪಸರಿಸಿ ನಿಶಿಚರ । ರುಸಿರಲಿ ಮೆಯ್ಮರೆಯೆ ॥ ೪ ॥ ಥರ ಥರ ನಡುಗ್ಯುರುಳುರುಳಿ ಬಿದ್ದೋಡುತ । ಲಿರುವರು ಅದರೊಳಗೆ ॥ ಭರದಿ ದುರುಳನರಮನೆಗಯ್ತಂದವ । ರರುಹೆ ಖಳಾಧಮಗೆ ॥ ೫ ॥

ರಾಗ ಮುಖಾರಿ ಏಕತಾಳ

ಲಾಲಿಸಿ ಕೇಳು ಕಂಸರಾಯ । ಬೆದರದಿರು ಜೀಯ । ಲಾಲಿಸಿ ಕೇಳು ॥ ॥ ಪ ॥ ಕರೆಯಲಟ್ಟಿದೆಯೈ ಯಾದವನ । ಪೋಗಿಯಕ್ರೂರ । ಭರದಿ ಗೋಕುಲಕೆ ಆ ಮಾಧವನ ॥ ಬರಿಸಲು ಬಲು ಗೋವಳರನು ನೆರಹಿಸಿ । ಶರಧಿತೆರದಿ ಬಲು ತ್ವರಿತದೊಳೆಮ್ಮಯ । ಪುರಕಯ್ತಂದರು ಅರುಹುವುದೇನಾ । ವಿರುಪಂತೆಸಗ್ಯೆ ದೊರೆಯೆ ಪರಾಕೆ ॥ ಲಾಲಿಸಿ ॥ ೧ ॥ ಎಸೆವ ಶಸ್ತ್ರಶಾಲೆಗಯ್ತಂದ । ದ್ವಾರದಿ ನಿಂತ । ಅಸುರರ ದೂಡುತೊಳಗೆ ಬಂದ ॥ ಮುಸಿಬಣ್ಣನು ತಾ ಕುಶಲದಿ ಬಿಲ್ಲೆ । ತ್ತಿಸಿ ತುಸು ಜಗ್ಗಿಸಿ ನಸಿಯುರಿವುತ ನ । ಮ್ಮುಸುಡಿಗೊದೆದು ಖಳರಸುವನು ತೊಲಗಿಸಿ । ರಸೆಯೊಳೊರಗಿಸಿದನುಸಿರ್ವೆ ಪರಾಕೆ ॥ ಲಾಲಿಸಿ ॥ ೨ ॥ ಒಡೆಯ ನಿನ್ನಿಂದ ನೀನೇ ಕೆಡುವೆ । ಬೆದರಿಸದಿರು । ತಡೆಯದೆ ಕಂಡುದ ನಾ ನುಡಿವೆ ॥ ಬೆಡಗಿನ ಗೋವಳ ಹುಡುಗರ ಬರಿಸಿ ನೀ । ಕೆಡಲುಚಿತವೆ ಬಿಡು ಬಿಡು ನಿನ್ನಯ ಬಹು । ಸಡಗರವವರೊಳು ನಡೆಯದು ನಮ್ಮನು । ಒಡೆದು ಕೆಡಹಿದರೊಡೆಯ ಪರಾಕು ॥ ಲಾಲಿಸು ॥ ೩ ॥

ವಾರ್ಧಿಕ

ನುಡಿಯ ಕೇಳುತಲಿ ಕಿಡಿಗೆದರಿ ಕಂಸಾಸುರನು । ಪಡೆಯ ಕರೆಸಿದ ರಥಪದಾತಿಚತುರಂಗಬಲ । ನಡೆದು ಗೋವಳರ ಹಿಡಿಹಿಡಿದು ನಮ್ಮೆಡೆಗೆ

ಬರಗೊಡದೆ ತಡೆಸುತ್ತವರನು ॥ ಜಡಿದು ಮಾಂಸಗಳ ಕಡಿಕಡಿದು ಭೂತಾಹುತಿಯ । ಬಡಿಸಿಬಿಡಿರೆಂದು ನೇಮವ ಕೊಡುತ ಕಳುಹಲಾ । ಕಡುಪರಾಕ್ರಮಿಗಳೆಡೆಬಿಡದೆ ನಡೆದುದು ನಿವಹ ಪೊಡವಿಯಗಲದೊಳಾಗಲು ॥ ೧ ॥

ರಾಗ ಆಹೇರಿ ಝಂಪೆತಾಳ

ಬಂದರಾಹವಕೆ ಖಳರಾಗ । ಕುದುರೆ । ಮಂದಿ ಗಜ ರಥ ಚತುರ್ಬಲ ನೆರಹಿ ಬೇಗ ॥ ಪ ॥ ಹೊಡೆವ ಭೇರಿಗಳ ತಂಬಟೆ ಪಟಹ ನಿಸ್ಸಾಳ । ಗಡಿಬಿಡಿಯ ಢಕ್ಕೆ ಡಮರುಗ ಕೊಂಬು ಕಹಳೆಗಳ । ನುಡಿವ ಮೌರಿಯು ಉಡುಕು ಚಕ್ರ ತಾಳಗಳ ಬಹು । ಸಡಗರದ ನಿನಾದದ ವಾದ್ಯಗಳ ॥ ಕೂಡು । ತೊಡನೆ ಪಡೆ ನಡೆವ ಸಂಭ್ರಮದ ಚೋದ್ಯಗಳ ॥ ೧ ॥ ರಥಕಡರಿ ಕುದುರೆಯೇರುತ ಗಜದಿ ಕುಳಿತು ಬಹು । ಜತನದಲಿ ನಡೆವ ಅತಿರಥರು ಮಹರಥರುಗಳ । ಪೃಥಿವಿ ನೆಗ್ಗಲು ಕಮಠ ಧರೆ ಬಿರಿವ ತೆರದಿ ಬಂ । ದತುಳ ಧೈರ್ಯದೊಳಗೊಂದಾಗಿ ॥ ಕಂಡು । ಮಥನಿಸುತ ಹರಿಬಲರು ಬಂದರಿದಿರಾಗಿ ॥ ೨ ॥ ಮೆರೆವ ಖಡ್ಗ ಕಠಾರಿಯಿಾಟಿ ತೋಮರ ಕುಂತ । ಪರಶು ಶೂಲ ಮುಸುಂಡಿ ಮುದ್ಗರ ಕೃಪಾಣಗಳ । ಧರಿಸಿ ಬರುತಿಹ ಖಳರ ನೆರವಿಯೊಳು ಹೊಕ್ಕು ತರಿ । ತರಿದು ಕೆಡಹಿದನು ಬಲರಾಮ ॥ ಪಟುಭಟರ । ಶಿರಗಳನು ಕಡಿದ ಶ್ರೀಕೃಷ್ಣ ರಣಭೀಮ ॥ ೩ ॥

ರಾಗ ಶಂಕರಾಭರಣ ಪಂಚಾಗತಿ ಮಟ್ಟೆತಾಳ

ಒತ್ತಿ ಬರುವಭಟರು ಸುತ್ತಮುತ್ತ ಕವಿವುತ । ಎತ್ತಿ ಬಿಲ್ಲ ಕಡಿಯೆ ಹರಿಯು ಎತ್ತಿ ಹಿಡಿವುತ ॥ ಮತ್ತೆ ಹರಿ ಗೋವಳರಿಗಭಯವವಿತ್ತನಾಗಲು । ಧೂರ್ತಜನರ ತಡೆಸುತವರನೆತ್ತಿ ಹೊಡೆಯುಲು ॥ ೧ ॥ ಉಟ್ಟ ವಸನ ಸೆರಗ ಕಟಿಗೆ ಕಟ್ಟಿ ಲಂಘಿಸಿ । ಅಟ್ಟಿ ಬೆರಸಿ ಖಳರ ಶಿರವ ಕುಟ್ಟಿ ಹಾರಿಸಿ ॥ ದಿಟ್ಟರಾಗಿರುವರೆದೆಯ ಮೆಟ್ಟಿಯುಡರಿದ । ಹೊಟ್ಟೆ ಬೆಳೆದ ಭಟರಿಗಮರಬಟ್ಟೆ ತೋರಿದ ॥ ೨ ॥ ಒಬ್ಬರುಳಿಯದಂತೆ ಕೊಂದ ಸರ್ಬದಳವನು । ಊರ್ಬಿಪಾಲ ಕೆಳೆಯರೊಳು ತನುಬ್ಬಿ ಬೆರೆದನು ॥ ೩ ॥

ವಾರ್ಧಿಕ

ಉತ್ತರೆಯ ಸುತನೆ ಸೀ ಚಿತ್ತವಿಸು ಸುಭಟಜನ । ಮೊತ್ತಮಂ ಸವರಿ ಹರಿಯಿತ್ತ ಕೆಳೆಯರ ತನ್ನ । ಹತ್ತಿರಕೆ ಬರಿಸಿಯಿರಲಿತ್ತ ರವಿ ಪಶ್ಚಿಮದಲೊತ್ತಿಲಿಹ ಶರಧಿಗಿಳಿಯೆ ॥ ಧೂರ್ತ ಕಂಸನು ರಣದ ವರ್ತಮಾನವ ಕೇಳಿ ।

ಚಿತ್ತದಲಿ ಬೆದರಿ ತಲೆಗುತ್ತಿಯಾ ಗೋವಳನ । ವ್ಯರ್ಥ ಬರಿಸಿದೆನೆಂದು ಮತ್ತೆ ವೊಳಸರಿದುಮಳಲುತ್ತ ಗುಪ್ತದೊಳೊರಗಿದ ॥ ೧ ॥

ಕಂದ

ಈಪರಿಯಳಲುತ ಭಯದೊಳ್ । ಶ್ರೀಪತಿಯಂ ನೆನೆನೆನೆವುತ ಸಜ್ಜಾ ಗೃಹದಿಂ ॥ ತಾ ಪವಡಿಸಿ ಕನಸಿನೊಳಂ । ಲೋಪದ ಸ್ವಪ್ನವ ಕಂಡಂಜುತ ಲಿಂತೆಂದಂ ॥ ೧ ॥

ರಾಗ ನೀಲಾಂಬರಿ ರೂಪಕತಾಳ

ಏನಮಾಡಲಿ ನಾನಿನ್ನೇನ ಕಂಡೆನು ಕನಸಿನೊಳ್ । ಏನಾಗುತಿದೆಯೊ ನಾನೇನ ಮಾಡುವೆನು ॥ ಪ ॥ ನೆತ್ತಿಗೆ ತೈಲವನೊತ್ತುತ ಮೃತ್ತಿಕೆ ಲೇಪಿಸಿ ತನುವಿಗೆ । ಕತ್ತೆಯನಡರುತ ದಕ್ಷಿಣಯಾತ್ರೆಗೆ ಗಮಿಸಿದುದ ॥ ಕೃತ್ರಿಮವಹ ಕನಸಿನೊಳ್ ಪ್ರತ್ಯಕ್ಷದಿ ಕಂಡೆನು ಸ್ವಪ್ನವ । ಮೃತ್ಯುವೆ ಸರಿ ತನಗದು ನಾ ಬಿತ್ತರಿಸಲರಿಯೆ ॥ ೧ ॥ ಬೆದರುತ ನಾನೆದ್ದರೆ ಎನ್ನಿದಿರಿಗೆ ಸತ್ತವರಿದಕೋ । ಕದುಕುತಲೆನ್ನಮರ್ದಪ್ಪುವರಿದೆಯೆನ್ನನು ಬಿಡವೆ ॥ ಇದೆಯೆನ್ನಯ ತಲೆ ತಡ ವರಿಸಿದರೆನಗದು ಕಾಣದರಿಂ । ದಧಿಕವೆ ದರ್ಪಣವೀಕ್ಷಿಸಲಿದರೊಳು ಕಾಣಿ ಸದು ॥ ೨ ॥ ಉರಿವುದು ಒಂದೀಪವು ಇದು ಎರಡಾಗುತ ಕಾಣುತಿದೆ। ಆರಮನೆಯೆಲ್ಲವನೀಕ್ಷಿಸೆ ಹರಿಮಯವಾಯ್ತುಯ್ಯೋ ॥ ಬರಿಸಿದೆ ತಂಗಿಯ ಮಕ್ಕಳ ಕರೆಸಿದೆ ಆ ಕೃಷ್ಣನು ಬಹು। ಧರೆಯೊಳು ನಾಟಕಧಾರಿಯೆಂದರಿವೆನು ಮೊದಲವಗೆ ॥ ೩ ॥ ಕಡಲೊಳಗವತರಿಸನೆ ಮುಂಮಡುವಿಲಿ ಜನಿಸನೆ ಕಂಭವ। ನೊಡೆದುದಿಸನೆ ಪೂರ್ವದೊಳವ ಬೆಡಗಿನ ಮಾಯಕದಿ ॥ ಬಿಡದೆನ್ನಯ ಮನೆ ಯೊಳಗೆಲಡಹಾಯ್ವುತ ಬರುವನೊಯೆಂ । ದಡಿಗಡಿಗಂಜುತ ಝೋಂಪಿಸಿ ನಡನಡುಗಿದ ಮನದಿ ॥ ೪ ॥ ಏತಕೆ ಕಳುಹಿದೆ ಕರೆವರೆಯೇತಕೆ ಬರಿಸಿದೆ ಕೃಷ್ಣನ । ನೇತಕೆ ಈಪರಿ ಮಾಡಿದೆಯೇತಕೆ ಬಿಲುಮುರಿದ ॥ ಏತಕೆ ಸುಭಟರ ಕರೆದೆನೊ ಏತಕೆ ಕನಸನು ಕಂಡೆನೊ । ಏತಕೆ ಸುಡು ಜನ್ಮವ ಇನ್ನೇತಕೆ ಹರ ಹರನೆ ॥ ೫ ॥

ಭಾಮಿನಿ

ದುರುಳನೀಪರಿ ಮರುಗಿ ನಯನವ । ತೆರೆದು ನೋಡಲು ತನ್ನ ಅರ ಮನೆ । ಹೊರಗೊಳಗೆ ಶ್ರೀಕೃಷ್ಣಮಯವಾಗಿರಲು ನೆರೆ ಕಂಡ ॥ ಭರದಿ ಭಯದಿಂ ನೆನೆನೆನೆದು ಶ್ರೀ । ಪರಿಯ ಮೂರ್ತಿಯ ಹೃದಯಕಮಲದಿ । ನೆರೆವಿಡಿದ ಪುಣ್ಯಾತ್ಮರಾರಿವನಂತೆ ತ್ರಿಜಗದಲಿ ॥ ೧ ॥

ಕಂದ

ಮುದದೊಳು ಕಂಸನು ಈಪರಿ । ಬೆದರುತಲಿರುತಿರಲಾಗನಿತರೊಳುಂ ॥ ಪದುಮಾಪ್ತನು ಕಗ್ಗತ್ತಲೆ । ಯೊಡೆವುತ್ತುದಯಾದ್ರಿಗೆ ಬಂದಡರಿದನಾಗಳ್ ॥೧॥

ರಾಗ ಕಾಂಭೋಜ ಝಂಪೆತಾಳ

ಪಾಹಿ ಪಾಹಿ ಗೌರೀಶ । ಪಾಹಿ ಪಾಹಿ ಭಕ್ತಸುಪೋಷ । ಪಾಹಿ ಪಾಹಿ ಭೂತೇಶ । ಪಾಹಿ ಪಾಹಿ ॥ ಪ ॥ ಉದಯಕಾಲದೊಳೆದ್ದು ಕಂಸನಿತ್ತಲು ಹರನ । ಪದವ ಪೂಜಿಸಿ ಊಟವೊದಗಿ ಮಾಡಿದನು ॥ ೧ ॥ ಬಂದು ಪೀಠದೊಳು ಆನಂದದಿಂದಡರುತ್ತ । ಚಂದದಿಂ ಕರೆಸಿದನು ಮಂದಿಮಾರ್ಬಲವ ॥ ॥ ೨ ॥ ಹಸ್ತಿ ಮಲ್ಲ ಚಾಣೂರ ಮುಷ್ಟಿಕಾದ್ಯರನು ಸ । ಮಸ್ತರ ಬರಿಸುತ್ತ ಬಿತ್ತರಿಸುತಿರ್ದನು ॥ ೩ ॥ ನಂದಗೋಕುಲದ ಗೋವಿಂದನೆಂಬವನೊರ್ವ । ಬಂದ ರಜಕನಸು ಕೊಂಡ ಗಡ ಮತ್ತೀಗ ॥ ೪ ॥ ಜರಿದೆ ನಮ್ಮಯ ಬಿಲ್ಲ ಮುರಿದು ದೈತ್ಯರನೆಲ್ಲ । ತರಿದು ನಮ್ಮೆಡೆಗೆ ತಾ ಬರುವನಂತೆ ಮತ್ತಿಲ್ಲಿ ॥ ೫ ॥ ತಡೆದು ಬಾಗಿಲೊಳ್ ನೀವು ಬಿಡದೆ ಮತ್ತವರನ್ನು । ಬಡಿದು ನಮ್ಮೆಡೆಗೆ ಬಂದೊಡನೆ ಪೇಳುವುದು ॥ ೬ ॥ ಪಂಕ್ತಿಪಂಕ್ತಿಯೊಳ್ ನೀವು ನಿಂತು ನಾನಡರುವ । ದಂತಿ ಹೆಬ್ಬಾಗಿಲೊಳು ಮುಂತೆ ನಿಲಿಸುವುದು ॥ ೭ ॥

ರಾಗ ಮಧ್ಯಮಾವತಿ ತ್ರಿವುಡೆತಾಳ

ಧೂರ್ತ ಕಂಸಾಸುರನ ಬೆಸನದಿ । ಮತ್ತಗಜಕುವಲಯಾಪೀಡವ । ಮತ್ತೆ ಮಾವುತನೇರಿ ನಡೆಸಲು । ಪೃಥ್ವಿ ನೆಗ್ಗುತ ನಡುಗಿತು ॥ ಹಸ್ತಿಪನು ಡೊಗ್ಗಾಲ ಮಂಡಿಸಿ । ನೆತ್ತಿಗಂಕುಶದಿಂದಿರಿಯೆ ಬಹು । ಸತ್ತ್ವದಲಿ ಸುಂಡಿಲವ ನಿಗುರಿಸು । ತತ್ತಲಿತ್ತಲೋಲಾಡಿತು । ಕೇಳು ಭೂಪ ॥ ೧ ॥ ಉದಯದೊಳು ಬಲರಾಮ ಕೃಷ್ಣರು । ಮುದದಿ ಕೆಳೆಯರು ಸಹಿತಲಿತ್ತಲು । ವಿಧವಿಧದಿ ದಧಿ ಘೃತದಿ ಭೋಜನ । ವೊದಗಿನಲಿ ರಚಿಸುತ್ತಲಿ ॥ ಅಧಿಕ ಸರಸದೊಳಮರ ವೈರಿಯ । ಸದನವೀಕ್ಷಿಸಲೆನುತ ಬರುತಿರೆ । ಇದಿರೊಳಿಹ ಮದಗಜವ ಕಾಣುತ । ಬೆದರಿದರು ಗೋಪಾಲರು । ಕೇಳು ಭೂಪ ॥ ೨ ॥ ಹರಿಯು ಕೆಳೆಯರಿಗಭಯ ಕರತಳ । ಭರದಿ ತೋರಿ ಗಜೇಂದ್ರನಿದಿರೊಳು । ಸರಿದು ಹಸ್ತಿಪಗರುಹಿದನು ತಿರು । ತಿರುಹಿಸೆಲೊ ಖಳ ಹಿಂದಕೆ ॥ ತೆರಹಗೊಡದಿರೆ ನಿನಗೆ ಶರಣಿಜ । ನಿರುವ ಅರಮನೆ ತೋರಿಸುವೆನೆಂ । ದಿರದೆ ಗಜ ಮಸ್ತಕವ ಹೊಯ್ಯಲು । ಸುರಿದುದರುಣಜಲೌಘವು । ಕೇಳು ಭೂಪ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಮತ್ತೆ ಕರಿ ಸುಂಡಿಲವ ನಿಗುರಿ । ಸುತ್ತ ಹರಿಯ ಹಿಡಿದು ಸುತ್ತಿ । ಸುತ್ತಿಯೆಳೆವುತಿರಲು ಗೋಪ । ಮೊತ್ತ ಬೆದರಲು ॥ ಒತ್ತಿ ಬಿಡಿಸಿಕೊಳುತ ಹಿಂದೆ । ನಿತ್ತು ಬಾಲ ಹಿಡಿದುಕೊಂಡಿ । ಪ್ಪತ್ತು ಬಿಲ್ಲಂತರಕೆಯುತ್ತ । ಲಿತ್ತ ಲೆಳೆದನು ॥ ೧ ॥ ತಿರುಗಿ ಗಜವು ಹರಿಯ ಬೆನ್ನ । ಬೆರಸಲಾಗ ಕೃಷ್ಣ ಧರೆಗೆ । ಯುರುಳಿಬಿದ್ದ ತೆರದಿ ಕೆಡೆದು । ಭರದೊಳೋಡಿದ ॥ ಹರಿಯನಟ್ಟಿ ಹಿಡಿವುತಿರೆ ಶ್ರೀ । ವರನುಲಿದರಡಿಯನು ಸರಿಯೆ । ಸ್ಮರಿಸಿ ಶ್ರುತಿಗಳರಸುವಂತೆ । ಅರಸು ತಿರ್ದನು ॥ ೨ ॥ ಯುಗಸಹಸ್ರ ಕಾದಿದರೆ ತ್ರೈ । ಜಗದೊಳಾರು ಬಗೆವರಿ ದನು । ಸಿಗಿದುಬಿಡುವೆನೆಂದು ಕೃಷ್ಣ । ನಗುತ ಮುಷ್ಟಿಯ ॥ ನಿಗುರಿಸುತಲಿ ಹಿಡಿದು ಕಿಡಿಯ । ನುಗುಳಿ ಗಜದ ಮಸ್ತಕವನು । ನೆಗೆದು ಹೊಯ್ವ ಭರಕೆ ಧರೆಗೆ । ಮಗುಚಿ ಕೆಡೆದುದು ॥ ೩ ॥ ಬಿಡವೆ ಗಜದ ಪೆಣನ ಮೆಟ್ಟಿ । ಯಡರಿ ಮುಸುಡಿಗೊಡೆದು ದಂತ । ಝಡಿದು ಕಿತ್ತ ಕಂಸನೃಪನ । ತುಡುಕಿ ಹಲ್ಲನು ॥ ಹಿಡಿದು ಕೀಳ್ವ ತೆರದಿ ಕಿತ್ತು । ತಡೆಯದೊಂದು ಹಲಧರಂಗೆ । ಕೊಡುತ ಲೊಂದ ತಾನು ಧರಿಸಿ । ನಡೆದ ಮುಂದಕೆ ॥ ೪ ॥ ಅರಮನೆಯ ಸರಾಗ ದಿಂದ । ಭರದಿ ಹೊಗುತ ದ್ವಾರದೊಳಗ । ಲ್ಲಿರುವವರನು ತರಿದು ಒಳಗೆ । ಸರಿಯೆ ಕಾಣುತ ॥ ಮೆರೆವ ಚಾಣೂರ ಮುಷ್ಟಿಕರೆಂ । ದಿರುವ ಮಲ್ಲರುಗಳು ಹರಿಯ । ಕರವ ಹಿಡಿದು ನಿಲಿಸಿ ವಿಾಸೆ । ತಿರುಹುತೆಂದರು ॥ ೫ ॥

ರಾಗ ಭೈರವಿ ಏಕತಾಳ

ಎಲೆ ಎಲೆ ಏನ್ನೈ । ನಿಲ್ ನಿಲ್ ಪೇಳುವೆ । ಬಲ್ ಬಲ್ ಬಗೆ ಬೀರುತ್ತ ॥ ಗಲ್ ಗಲ್ ಮಾಡುವೆ । ಹಲ್ ಹಲ್ ಮುರಿವೆನು । ಛಲ್ ನಿಲ್ ಬಿಡು ನೋಡಿತ್ತ ॥ ೧ ॥

ರಾಗ ಶಂಕರಾಭರಣ ಅಷ್ಟತಾಳ

ಹಲ್ಲ ಮುರಿವುದೇಕೆ ಮಧುರೆ । ಯೊಲ್ಲಭನೆನ್ನ ಮಾವನು ॥ ಇಲ್ಲಿ ಬರಿಸಲು ನಾ ಬಂದೆ । ಮಲ್ಲ ಚಾಣೂರ ॥ ೧ ॥

ರಾಗ ಭೈರವಿ ಏಕತಾಳ

ಧೊರೆ ನಿನ್ನ ಬರಿಸಿದ । ಧುರದೊಳ್ ಗೇಲವ । ವರಿಸಲ್ ಬಗೆಯೊಳ್ ಗೆಣೆಯ ॥ ಶರ ಗಿರ ಸಲ್ಲದು । ಬರಿಬರಿಗಯ್ಯೊಳ್ । ಧುರದೊಳ್ ತೋರಿಸು ವುದು ಭುಜಸಿರಿಯ ॥ ೨ ॥

ರಾಗ ಶಂಕರಾಭರಣ ಅಷ್ಟತಾಳ

ಅಡವಿಯೊಳ್ ಗೋವುಗಳನು । ಬಿಡದೆ ಕಾವ ಗೊಲ್ಲ ಹುಡುಗ ॥ ರೊಡನೆ ಯುದ್ಧ ತರವೆ ಮಲ್ಲ । ರೊಡೆಯ ಚಾಣೂರ ॥ ೨ ॥

ರಾಗ ಭೈರವಿ ಏಕತಾಳ

ಬಿಡು ಬಿಡು ನಿನ್ನ ಬಹು । ಸಡಗರವೆನ್ನೊಳ್ । ನಡೆಯದು ಕೇಳ್ ಗೊಲ್ಲರ ಹುಡುಗ ॥ ಒಡೆಯನು ಅರ್ಥಿಯ । ಪಡೆಯಲು ಯುದ್ಧವ । ಕೊಡು ಕೇಳ್ ತೋರುವ ನಾವ್ ಬೆಡಗ ॥ ೩ ॥

ರಾಗ ಶಂಕರಾಭರಣ ಅಷ್ಟತಾಳ

ಬಡವರಾವಲ್ಲವೆ ಜಗದಿ । ಒಡೆಯ ಗರುಡಿ ವಿದ್ಯೆಯೆಮಗೆ ॥ ಬಿಡದೆ ಕಲಿಸಿದನಾವಾತ । ನುಡಿಯೊ ಚಾಣೂರ ॥ ೩ ॥

ರಾಗ ಭೈರವಿ ಏಕತಾಳ

ಶಕಟಾಸುರ ಧೇನುಕ ವಾತಾಸುರ । ಬಕ ವೃಷಭಾದ್ಯರ ನೀ ಮೊದಲು ॥ ಚಕ ಚಕ ಕಡಿದಿಡಲಿಲ್ಲವೆ ಧುರದೊಳ್ । ಯುಕುತಿಯ ಬಲ್ಲೆನು ಕೇಳ್ ತಿಳಿದು ॥ ೪ ॥

ರಾಗ ಶಂಕರಾಭರಣ ಅಷ್ಟತಾಳ

ಎಲ್ಲ ಖಳರು ನಿನ್ನಂಥವ । ರಲ್ಲ ಜಗದಿ ಪ್ರಬಲ ನೀನೆ ॥ ಮಲ್ಲರೊಳ್ ಬಲ್ಲಿದನು ನಿನಗಿದಿ । ರಿಲ್ಲ ಚಾಣೂರ ॥ ೪ ॥

ರಾಗ ದೇಶಿ ಅಷ್ಟತಾಳ

ಭಲೆ ಭಲೆ ಭಲೆ ಗೋವಿಂದ । ಎಲ ಎಲ ಮುಕುಂದ । ಗೋವಿಂದ ॥ ॥ ಪ ॥ ಬಿಡು ಬಿಡು ನೀ ಸಡಗರ ಬೀರುವೆಯ । ತಡೆಯದೆನ್ನೊಳು ಕೊಡು ನೀ ಕಯ್ಯ । ಭುಜಹೊಡೆದೆಯ್ಯ ಸಿಡಿದಾಡಯ್ಯ ॥ ೧ ॥ ಬಲ್ಲಿದ ನೀನಹು ದಹುದು ಬಾರಯ್ಯ । ಮಲ್ಲ ರಣಾಗ್ರವ ತೋರಯ್ಯ । ನೆಗೆದಾಡಯ್ಯ ಎಲೊ ರಂಗಯ್ಯ ॥ ೨ ॥ ತಟ್ಟುತ ಜಂಘೆಯ ಬಿಡದೆ ನೀಯೆನ್ನ । ಕುಟ್ಟುವೆ ನಿನಗೆ ಪ್ರಸನ್ನ । ಹೆಟ್ಟುವೆ ಆಮೇಲ್ ಕೇಳ್ ಗುಣರನ್ನ । ಮುಕುಂದ ಗೋವಿಂದ ॥೫॥

ರಾಗ ಸುರುಟಿ ಏಕತಾಳ

ಅಡಿಗಡಿಗವರ್ ಧುರದಿ । ಬಿಡದೊದಗಿದರಾಗ ॥ ಝಡಿದು ವಿಡಿದು ಬಡಿದು । ಹೊಡೆದು ಭುಜವ ಬೇಗ ॥ ೧ ॥ ಖರಖರಖರ ಪಲ್ಗಡಿವುತ ।

ಘೆರಘೆರಘೆರಘೆರ ತಿರುಗಿ ॥ ಸರಸರ ಬಂದಪ್ಪಳಿಸ್ಯರೆ । ಧರಧರಿಸುತ ನರುಗಿ ॥ ॥ ೨ ॥ ವರ್ಮದಿ ತಂತಮ್ಮೊಳು । ಘುಮ್ಘುಮ್ಮನೆ ಗುದ್ದ್ಯವರು ॥ ಘಮ್ಮನೆ ಮೆಯ್ ಜೋಂಪಿಸುತಿರೆ । ಸುಮ್ಮನೆ ನಿಲುತವರು ॥ ೩ ॥ ಕಿಡಿಕಿಡಿಯುಗು ಳುತ ಕಣ್ಣೊಳು । ಸಿಡಿಸಿಡಿವುತ ಹರಿಯು ॥ ಪಿಡಿಪಿಡಿಪಿಡಿದಿಹ ಬಂಧವು । ಬಿಡಿಬಿಡಿಸಿ ಮುರಾರಿ ॥ ೪ ॥ ಅಪ್ಪುತ ಹರಿ ಚಾಣೂರನ । ಅಪ್ಪಳಿಸಿದ ಧರೆಗೆ ॥ ಘಪ್ಪನೆ ಉಸಿರಡಗುತ ಮ । ತ್ತಪ್ಪದೆ ಬಂತವಗೆ ॥ ೫ ॥ ಕ್ರಮ ತಪ್ಪುತ ಬಡೆಯುದಿರಲೆ । ಕಮಲಾಕ್ಷನೆ ತಾಳು ॥ ಕ್ರಮದಿಂದೊಂದಪ್ಪುತ ಸೆಣಸುವ । ನಮನವಗೆ ಕೇಳು ॥ ೬ ॥ ತಿವಿಯೆಲೊ ಚಾಣೂರನೆ ನೀ । ತಿವಿವೆನು ನಾ ಮತ್ತೆ ॥ ಬವರವು ನಿನ್ನದು ಮೊದಲೆನೆ । ತಿವಿಯಲು ಕಾಣುತ್ತೆ ॥ ೭ ॥ ಅಸಮ ಸಾಹಸ ಮಲ್ಲನ । ಮುಸುಡನು ಹರಿ ತಿವಿದ ॥ ಬಿಸಿ ಬಿಸಿ ನೆತ್ತರ ಹೊರಡಿಸಿ । ವಸುಧೆಯೊಳೊರಗಿಸಿದ ॥ ೮ ॥

ಭಾಮಿನಿ

ಸುರಕದಂಬಕ ನಲಿಯೆ ಧುರದಲಿ । ದುರುಳ ಚಾಣೂರನನು ಲಕ್ಷ್ಮೀ । ವರ ನಭಸ್ಥಳಕೆತ್ತಿ ಸುಳಿಸುಳಿವುತ್ತಲಪ್ಪಳಿಸೆ ॥ ಹರಣವದು ಜುಣುಗಾಡಿ ನಡೆಯುಲು । ಹರಿಯ ಸರಿಸದಿ ಸುರರು ಪೂಮಳೆ । ಸುರಿಯಲಿತ್ತಲು ಭರದಿ ಹಲಧರಗೆಂದ ಮುಷ್ಟಿಕನು ॥ ೧ ॥

ರಾಗ ಭೈರವಿ ಝಂಪೆತಾಳ

ಎಲವೊ ಗೋಪಕುಮಾರ । ನಿಲು ಎನ್ನೊಳ್ ರಣಧೀರ । ಛಲವ ತೋರಿಸು ಭುಜದ । ಬಲವ ಬಲರಾಮ ॥ ಛಲವ ತೋರಿಸಲು ಎನ । ಗಳವಲ್ಲ ನಿನ್ನೊಡನೆ । ಬಲು ಭಟನು ನೀ ರಣದಿ । ಯೆಲೊ ಮಲ್ಲರೊಡೆಯ ॥ ೧ ॥ ಬಲ್ಲೆ ನಿನ್ನಯ ತಮ್ಮ । ಮಲ್ಲ ಚಾಣೂರನನು । ಕೊಲ್ಲಲಿಲ್ಲವೆ ನಿನ್ನ । ಹಲ್ಲ ಕಳಚುವೆನು ॥ ಹಲ್ಲ ಕಳಚುವೆನೆಂಬ । ಸೊಲ್ಲನಿನ್ನೊಮ್ಮೆ ನುಡಿ । ಆಳ್ಕೆ ಬಿಚ್ಚಿಸುವೆ ಕೇಳ್ । ಖುಲ್ಲ ಮುಷ್ಟಿಕನೆ ॥ ೨ ॥ ಬಿಡು ಬಿಡು ಪರಾಕ್ರಮವ । ನುಡಿಯುಬೇಡೆನುತ ಕರ । ಹಿಡಿದೆಳೆದು ಮುಷ್ಟಿಕನು । ಜಡಿದಿಟ್ಟನೊಂದ ॥ ನಿಡಿದು ಲಂಘಿಸಿ ರಾಮ । ಪಿಡಿದವನ ಕಿಬ್ಬದಿಯ । ಹೊಡೆದಬ್ಬರಕೆ ರಕುತ । ಬುಡುಬುಡಿಸುತಿಳಿಯೆ ॥ ೩ ॥ ತಟ್ಟೆ ಭುಜವನುಮುಮಲ । ದಿಟ್ಟ ಬಲ ರಾಮನನು । ಪೆಟ್ಟಿದನು ಹಡಕಿಗೊಂ । ದಿಟ್ಟ ಮತ್ತೊಡನೆ ॥ ಸಿಟ್ಟಿನಲಿ ಪಲ್ ಗಡಿದು । ಕುಟ್ಟಿ ಮುಸುಡಿಗೆ ಖಳನ । ಹೊಟ್ಟೆ ಗುಮ್ಮಿಡೆ ಮೆಟ್ಟಿ । ರಟ್ಟಿಸಿದ

ರಾಮು ॥ ೪ ॥ ಮಲ್ಲಮುಷ್ಟಿಕ ಬಲನ । ಘಲ್ಲಿಸುತ ತುರುಬ ಹಿಡಿ । ದುಲ್ಲಂಘಿಸುತ ಹೊಯ್ದು । ನಳ್ಳಿ ಗುಮ್ಮಿಡಲು ॥ ಘುಳ್ಳು ಘುಳುಘುಳಿಸ್ಯವನ । ಗಲ್ಲಸಂದಿಗೆ ಹೊಯ್ದು । ಹಲ್ಲಕಳಚುತ ರಕುತ ಚೆಲ್ಲಿದನು ರಾಮು ॥ ೫ ॥ ನಡುನಡುಗಿ ಮುಷ್ಟಿಕನು । ಘುಡುಘುಡಿಸಿ ಸೆರಗ ಹಿಡಿ । ಹಿಡಿದೆಳೆದು ಹಲಧರನ । ಬಿಡದೆ ಧುರಕಾಗ ॥ ೬ ॥

ರಾಗ ಪಂಚಾಗತಿ ಮಟ್ಟೆತಾಳ

ಬಾರೊ ಬಾರೊ ಸಮರಕೆನ್ನೊಳು । ಬಲರಾಮ ಬೇಗ । ಬಾರೊ ಬಾರೊ ॥ ಪ ॥ ಬಾರೊ ಬಾರೊ ಕರಗಳೆರಡ । ತೋರೊ ತೋರೊ ಮಲ್ಲ ಯುದ್ಧ । ಧೀರ ನೀನೆಂದೆನುತ ಸೆರಗ । ವಿ..ರಿ ಹಿಡಿದು ಎಳೆದ । ಬಾರೊ ॥ ॥ ಅ ॥ ಒಡೆಯ ಕಂಸ ರಣವ ನೋಡಿ । ಬಿಡಲಿ ಪರಸವೆನುತ ಭುಜವ । ಹೊಡೆದು ಗರ್ಜಿಸುತಲಿ ಕಯ್ಯ । ಹಿಡಿದು ಎಳೆದ ಹಲಧರನು । ಪೊಡವಿಯೊಳಗೆ ಕೆಡಹುತಿರಲದ ॥ ಕಂಡು ರಾಮು । ಬಿಡಿಸಿ ಬಂಧಗಳನು ತುಡುಕಿದ । ಖಳನ ಮುಗುಚು । ತೊಡನಡರಿ ಮುಸುಡ ಮೆಟ್ಟಿದ । ಮತ್ತೆ ತನ್ನ । ತೊಡೆಯ ಮೆಟ್ಟಿ ಹರಿಯ ನೋಡಿದ ॥ ನಗುತಲಿರ್ದ । ಬಾರೊ ॥ ೧ ॥ ಮತ್ತೆ ರೋಹಿಣಿಜನ ತ । ಗ್ಗೊತ್ತಿ ತುಡುಕಿ ಖಳನು ಧೈರ್ಯ । ವೆತ್ತು ಮುಷ್ಟಿ ಬಲಿದು ಗಗನ । ಕೆತ್ತಿ ತಿವಿದ ತಿವಿಯ ಸೈರಿ । ಸುತ್ತ ರಾಮನವನ ಶಿರವನು ॥ ಹೊಯ್ದು ಭರಕೆ । ನೆತ್ತಿಯೊಡೆದು ಧರೆಗುರುಳ್ದನು । ಜವದಿ ಬಂದು । ಕೃಷ್ಣನವನ ಎದೆಯಲೊದೆದನು । ಭಟನ ಜೀವ । ವೆತ್ತ ಹೋಯಿತೆನುತಲರಿಯೆನು ॥ ನೃಪ ಕೇಳು ನೀನು । ಬಾರೊ ॥ ೨ ॥ ಧುರವ ಕಂಡು ಬೆದರಿ ಕೆಲರ । ಲ್ಲಿರುವ ಮಲ್ಲರುಗಳು ತಮ್ಮ । ಹರಣವುಳಿಸುವೆವೆಂದಾಗ । ಭರದಿ ಓಡುತಿರಲು ಕಂಸ । ಸರಿದು ಪೇಳ್ದ ಕರೆದು ಅವರನು ॥ ಕೃಷ್ಣ ಬಲರ । ತರಿದುಬಿಟ್ಟರವರ ಊರನು । ಗೋಕುಲವನು । ಭರದಿ ನಿಮಗೆ ಸೂರೆಬಿಡುವೆನು । ಎನುತ ಪೇಳಿ । ಇರದೆ ಗದ್ದುಗೆಯನು ಹೊಯ್ದನು ॥ ಗರ್ಜಿಸಿದನು । ಬಾರೊ ॥ ೩ ॥

ಭಾಮಿನಿ

ಕೊಲ್ಲಿ ವಸುದೇವನನು ಮಕ್ಕಳ । ನೆಲ್ಲರನು ವೃದ್ಧರನು ಕೊಲ್ಲೆಲೆ । ಕೊಲ್ಲಿರೈ ಸಲೆ ಉಗ್ರಸೇನನನಾತನನುಜನನು ॥ ಭಲ್ಲೆಯದೋಳಿರಿ ಕುಹಕಿ ಯಾದವ । ರೆಲ್ಲರನು ಕಡಿ ಕಡಿಯೆನುತ ಪೂ । ಮಲ್ಲ ಕೈವೀಸಲು ಮುರಾಂತಕನೆಂದ ಹಲಧರಗೆ ॥ ೧ ॥

ರಾಗ ಮಾರವಿ ಏಕತಾಳೆ

ನೋಡಿದೆಯು । ಅಣ್ಣ । ನೋಡಿದೆಯು ॥ ಪ ॥ ಧುರದಿ ಚಾಣೂರ ಮುಷ್ಟಿಕರ । ಶಿರವ ನಾವ್ ಖಂಡಿಸಲಾಗೆಮ್ಮ । ಪರಿಯ ನೋಡಿ ಬೆದರು ತ್ತಿಮುಗಿ । ಲ್ಲಿರುವ ಮಲ್ಲರು ॥ ಭರದಿ ಓಡುತಿರಲು ಕಂಸ । ನರಿದು ಅಭಯ ವಿತ್ತು ನಮ್ಮ । ಪುರವ ಸೂರೆಬಿಡುವೆನೆಂದು । ಕರೆದು ಕರೆದು ಪೇಳ್ದ ಮುಸುಡ । ನೋಡಿದೆಯ ॥ ೧ ॥ ನುಡಿಗೆ ತೆರಹಿಲ್ಲದೆ ಬಹು । ಬಡವರು ಮಲ್ಲರ ಪಡೆಯು । ಜಿಡದೆವೋಡುವವರನಿದಕೊ । ತಡಸುತವರನು ॥ ಕೊಡುತಲಭಯ ಕರೆತಾ ಹೋಗೆಂ । ದೊಡನೆ ಕಂಸನೃಪನ ದರ್ಪ । ಜಡಿದು ಬಿಸುಡುವೆ ನೋಡೆಂದು । ನುಡಿದನು ಜಗದೊಡೆಯನಂದು । ನೋಡಿದೆಯು ॥ ॥ ೨ ॥ ಭರದಿ ರೋಹಿಣಿಜನಿಗೆ ಶ್ರೀ । ವರನು ಅರುಹಿ ಪೀತಾಂಬರವ । ಸೆರಗ ಕಟಿಗೆ ಸುತ್ತಿಕೊಂಡ । ಲ್ಲಿರವೆ ಲಂಘಿಸಿ ॥ ದುರುಳನೇರ್ದ ಪೀಠದಿ ಬಂದ । ಡರಲು ಗರ್ಜಿಸುತ ಖಳನು । ತಿರುಗಿ ಸಿಡಿಲೊಲ್ ಖತಿಯುಲ । ಬ್ಬರಿಸು ತೆಂದನು । ನೋಡಿದೆಯ ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳೆ

ಎಲವೊ ಕೃಷ್ಣ ಎನ್ನೊಳಿಸಿತು ಸಲುಗೆಯೇನೆಲ । ಛಲದಿ ಎನ್ನಾಸನವ ನೇರ್ವೆ ಕೊಲುವೆ ನೋಡೆಲ ॥ ಸಲುಗೆಯಹುದು ಮಾವ ನಿನ್ನೊಳೆನಗೆ ದಿಟ ವದು । ಒಲಿದು ಎನ್ನ ಬರಿಸಿದೇಕೆ ತಿಳುಹಿಸೆನಗದು ॥ ೧ ॥ ಬಗುಳಬೇಡ ಬಲ್ಲೆ ನಿನ್ನ ಕಪಟಿಯೆಂಬುದ । ಮುಗುಧೆ ಪೂತನಿಯನು ಕೊಂದುದೇಕೆ ಪೇಳದ ॥ ಜಗದ ಜನರರ್ಭಕರುಗಳಿಗೆ ಆಗಡು ಮೊಲೆಯನು । ವಿಗಡ ವಿಷವ ನಿತ್ತರಿಂದ ಮುಗುಚಿ ಕೊಂಡೆನು ॥ ೨ ॥ ಅದನು ಬಿಡು ಕೇಳಿತ್ತ ನಮ್ಮ ಚಮುರ ಶಕಟನ । ಮುದದಿ ಕೊಂದೆಯೇಕೆ ನಿನ್ನ ಸದೆವೆಸೀಕ್ಷಣ ॥ ವಿಧದಿ ಕಪಟದಿಂದಲೆಮ್ಮ ಸದನ ಹೊಕ್ಕಿದ । ಪದದರಿಂದ ಪದದಿ ಭಂಡಿಯೊದೆದೆ ಕೇಳದ ॥ ೩ ॥ ಘಾತಕಿಯೆ ನೀ ನಡೆದ ನಡತೆ ನೀತಿಯೇನೆಲ । ವಾತಾಸುರನ ಕೊರಳ ತರಿದುದೇಕೆ ಪೇಳೆಲ ॥ ಏತಕೆನ್ನ ಜರೆವೆ ಮಾವ ಆತನೆನ್ನನು । ಭೀತಿಗೊಳಿಸುತಿರೆ ನಾ ಬೆದರಿ ನೀತಿ ತೋರಿದೆನು ॥ ೪ ॥ ಛಲರೆ ಬೆದರ್ವ ವೀರನಹುದು ತಿಳಿದೆ ನಿನ್ನನು । ಮುಳಿದು ಬಕನ ಸೀಳ್ದುದೇಕೆ ಕೊಳದೊ ಳವನೆನು ॥ ಖಳನು ಬಾಯ ತೆರೆದು ಎನ್ನ ಜಲಿದು ನುಂಗಲು । ಬೆಳೆವುತವನ ಉದರ ಸೀಳ್ದು ಸೆಳೆದೆ ಜೀವವು ॥ ೫ ॥ ಮಲ್ಲ ವೃಷಭಲಘು ಕೇಶಿಯರನೆಲ್ಲ

ತರಿದೆಲ । ಅಲ್ಲಿ ಸವರಿ ಇಲ್ಲಿ ಜೆದರಿ ಹಲ್ಲಬಿಡುವೆಯ ॥ ಹಲ್ಲ ಬಿಡಿಸುವೆನು ನೋಡೆಂದು ಮಲ್ಲ ಕಂಸನ । ಘಲ್ಲಿಸುತ್ತ ಹಿಡಿದು ಎಳೆದ ಕೃಷ್ಣನಾಕ್ಷಣ ॥ ೬ ॥

ರಾಗ ಭೈರವಿ ಏಕತಾಳ

ಈ ತೆರದಲಿ ಪಿಡಿವುತಲಿ । ರೋ । ಷಾತುರನಾಗಿ ದೂಡುತಲಿ ॥ ಕಾತರದಿಂದೆದೆಗಡರಿ । ಒದ್ದ । ನಾತತ್ ಕ್ಷಣಕಸುರಾರಿ ॥ ೧ ॥ ಮಾತೆ ಪಿತರಿಗಿವನಿಂದು । ಬಲು । ಯಾತನೆಬಡಿಸಿದನೆಂದು ॥ ಮಾತುಳ ಕಂಸನ ಕೊಂದು । ಪ್ರ । ಖ್ಯಾತಿಯೊಳೆಳೆದನಂದು ॥ ೨ ॥ ಓಡುವರನು ಕರೆ ಕರೆದು । ಕರ । ನೀಡುತಲಭಯುವನೊರೆದು ॥ ಗಾಢದಿ ಪುರಗಳ ಬಲವ । ಹಲು । ನೋಡುತ ನಿಲಿಸಿದ ಭಯುವ ॥ ೩ ॥

ಭಾಮಿನಿ

ಅರಸ ಕೇಳನವರತ ವೈರೋ । ತ್ತರದ ಭಯ ಭಾರದಲಿ ನೆನೆನೆನೆ । ದಿರುಳು ಹಗಲೋರಂತೆ ತನ್ಮಯನಾಗಿ ಮೂಜಗವ ॥ ಬೆರಸಿ ಕಾಣುತ ಕಂಸನಾ ಮುರ । ಹರನ ಸಾರೂಪ್ಯವನು ಪಡೆದನು । ಪರಮ ಭಕ್ತರಿಗಿನ್ನು ದುರ್ಲಭವೇನು ಹೇಳೆಂದ ॥ ೧ ॥

ಕಂದ

ಧರಣಿಪ ಕೇಳಮುರಾರಿಯು । ಮುರಹರನೊಳ್ ಬೆರಸುತ್ತಿರಲವ ನರ್ಧಾಂಗಿಯ ॥ ರೀರ್ವರು ಬಂದವನಂಗದಿ । ಮರುಗುತ ಬಿದ್ದುರೆ ಬಾಯ್ಬಿಟ್ಟಳಲಿದರಾಗಳ್ ॥ ೧ ॥

ರಾಗ ನೀಲಾಂಬರಿ ತ್ರಿವುಡೆತಾಳ

ಲಾಲಿಸೆಮ್ಮಗಲಿ ಪೋದೆಯೊ ಕಾಂತ । ಯಾಕೀ । ಧೂಳಿಯೊಳೊರಗಿ ದೆಯ್ಯೆ ವ್ಯರ್ಥ ॥ ಬಾಳಲಾರೆವು ನಿನ್ನ ಕ್ಷಣ ಬಿಟ್ಟು । ಬೇಗ । ಏಳು ಧೈರ್ಯವ ಪೇಳಭಯುಗೊಟ್ಟು ॥ ೧ ॥ ಶಿಶುಪಶು ದ್ವಿಜರ ಹತ್ಯವನೆ । ಮಾಡಿ । ವಸರಿ ಹಾರಿತು ನಿನ್ನಾಯುಷ್ಯವ ॥ ರಸೆಯೊಳೀಪರಿಯಾಯ್ತು ನಿನಗೆ । ಎದ್ದಿ । ಸ್ನಸಿರು ವಲ್ಲಭನೆ ಬುದ್ಧಿಯೆಮಗೆ ॥ ೨ ॥ ಸಕಲಂತ ರ್ಯಾಮಿ ಮಾಧವ ನಿನ್ನ । ಬಹು । ಶಕುತಿಗಂಜುವನೆ ಕೇಳ್ ಸಂಪನ್ನ ॥ ಮುಕುತಿಗಯ್ದಿದೆಯೆಂತಾದರು ದೇವ । ಮುಂದೆ । ಯುಕುತಿ ಪೇಳೆಮಗೆ ಮಹಾನುಭಾವ ॥ ೩ ॥ ಮುಗುಧೆಯರೀರ್ವರು ಅಳಲುತ್ತ । ಕೂಗಿ । ನಿಗಮಗೋಚರಗೆ ಪೇಳ್ದರು ಮತ್ತಾ ॥ ಜಗದೀಶನೆಮ್ಮ ವೈಧವ್ಯವ । ನೋಡಿ ।

ಸೊಗಸಾಯಿತಯ್ಯೊ ನಿನಗೆ ದೇವ ॥ ೪ ॥ ಮುನ್ನಿನ ಹಗೆಯ ಸಾಧಿಸಿದೆಯ। ಕೃಷ್ಣ । ಇನ್ನಾವ ಬಯಕೆಯುಂಟೆಲೊ ದೇವ ॥ ಅಸ್ಸರೆ ನಿನಗೆ ನಾವೆನ್ನುತ । ಶೋಕ । ವನ್ನು ತಾಳ್ದಳಲಿದರ್ ಪ್ರೊರಳುತ ॥ ೫ ॥

ಭಾಮಿನಿ

ಧರಣಿಪತಿ ಕೇಳ್ ಮುಗಧಭೂಪನ । ತರಳೆ ಹಸ್ತಿಪ್ರಹಸ್ತಿಯೆನಿಪರು । ಮರುಗುತಿರಲಾಗನಿತರೊಳು ನರಕಾಂತಕನು ದಯದಿ ॥ ಅರುಹಿದನು ಕೇಳತ್ತೆಯರಿರಾ । ಬರೆಹ ಮೀರುವರಾರು ಜಗದೀ । ಶ್ವರನ ತಂತ್ರವಿದೆಂದ ವರ ಸಂತವಿಸಿದನು ನಯದಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರಸ ಕೇಳ್ ಕಂಸಾಖ್ಯನೀಪರಿ । ಹರಿಯ ಕರಸಂಸ್ತುತ್ಯದಲಿ ಮೆರೆ । ದಿರುವ ವೈಕುಂಠಕ್ಕೆ ಗಮಿಸು । ತ್ತಿರಲಿಕಿತ್ತ ॥ ೧ ॥ ತುಂಟರವನನುಜರು ಗಳವರೆಂ । ಬೆಂಟು ಜನರನು ರಣದಿ ಹಲಧರ । ಕಂಠವನು ಬಿಗಿದೊತ್ತಿ ಕೊಂದನು । ತುಂಟರವರ ॥ ೨ ॥ ಅವರವರ ತರುಣಿಯರು ಬಾಯ್ ಬಿ । ಟ್ಟೊರಲಿ ಗೋಳಿಡುತಿರಲು ಲಕ್ಷ್ಮೀ । ವರನು ಸಂತವಿಸಿದನು ಜ್ಞಾನವ । ನರುಹಿ ದಯದಿ ॥ ೩ ॥ ಜೆದರಿ ಕಂಸನ ಭಯದೊಳೋಡಿದ । ಯದುವರರಿ ಗಭಯವನು ಪಾಲಿಸಿ । ಮುದದಿ ಕರೆಸುತ್ತವರವರ ಸದ । ನಗಳ ಕೊಡಿಸಿ ॥ ॥ ೪ ॥ ಕನಕ ವಸನವ ಧನ ಪಸುವ್ರಜ । ವನಿತೆ ಗೃಹ ಸಾಮ್ರಾಜ್ಯಭಾಗ್ಯವ । ನನುವುತದಿ ಕರುಣಿಸಿದನವರಿಗೆ । ಹರಿಯು ದಯದಿ ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಅಂದು ಧೈರ್ಯವನು ಗೋವಿಂದ ಯಾದವರಿಗಾ । ನಂದದಿ ಪಾಲಿಸುತ ॥ ಬಂದಿಯೊಳಿಹ ತಾಯಿತಂದೆಯರೆಡೆಗೆ ತಾ । ಬಂದನು ಜವಗೊಳುತ ॥ ೧ ॥ ಕಂದಿದಾನನವನೀಕ್ಷಿಸುತಳಲುವವರ । ಬಂದಿ ಸಂಕೋಲೆ ತೆಗೆಸಿ ॥ ಚಂದದಿ ಉಗ್ರಸೇನನ ನಿಗಳವನು ತಾ । ನಂದು ಇಕ್ಕಡಿಗೆಯ್ಸಿದ ॥ ॥ ೨ ॥ ಹೆಡಗಯ್ಯ ಬಿಗಿದ ದೇವಕನ ನೇಣನೆ ತಾನು । ಕಡಿದು ಗೋವಿಂದ ಬೇಗ ॥ ಒಡನೆ ದುಃಖಿಸಿ ತಾಯಿತಂದೆಯರಡಿಗಳ । ಪಿಡಿದಳಲಿದನಾಗ ॥ ೩ ॥ ಪಡೆದವರೊಡನೆ ನಾನಿರದೆ ನಿಮ್ಮೆಲ್ಲರ । ಬಿಡಲುಚಿತವೆ ಕೇಳೀಗ ॥ ಕಡು ದುಷ್ಟನೆಂದೆನ್ನ ಪೊಡವಿಯ ಜನರೆಲ್ಲ । ನುಡಿದು ದೂರುವರೆನ್ನೀಗ ॥ ೪ ॥

ಹರಿ ಬಲರಾಮರೀರ್ವರು ತಮ್ಮ ಕಣ್ಣೀರ । ಸುರಿದು ದುಃಖಿಸುತಿರಲು ॥ ಮರುಗಿ ದೇವಕಿವಸುದೇವರೀ ತರುಣರ । ಭರದಿ ಬಂದಪ್ಪಿದರು ॥ ೫ ॥ ವಿಗಡ ಪಾತಕಿಗಳಾವಲ್ಲವೆ ನಿಮ್ಮಂಥ । ಸುಗುಣದರ್ಭಕರ ಬಿಟ್ಟು ॥ ನಿಗಳಕ್ಕೆ ಸಿಕಿ ನಾವು ಪಡೆದ ಸೌಭಾಗ್ಯಕ್ಕೆ । ಜಗದೊಳಿನ್ನಾರಿಗುಂಟು ॥ ೬ ॥ ಇರಲಾ ಮಾತೆನುತಾ ದೇವಕಿ ತಮ್ಮ ತರಳರ । ಕರೆದು ಸಂತೋಷದೊಳು ॥ ಭರದೊ ಳೀರ್ವರ ತನ್ನ ತೊಡೆಯ ಮೇಲಿರಿಸಿ ತಾ । ನಿರದೆ ಮುದ್ದಾಡಿದಳು ॥ ೭ ॥

ರಾಗ ಕಾಂಭೋಜ ಏಕತಾಳ

ಮಕ್ಕಳ ಮುದ್ದಾಡಿದಳಾಗ । ದೇವಕಿ ತನ್ನ । ಮಕ್ಕಳ ಮುದ್ದಾಡಿದ ಳಾಗ ॥ ಪ ॥ ಬಾರೊ ಇತ್ತ ಎಲೊ ರಂಗಧಾಮ । ಬಾ ಬಾ ಬಲರಾಮ । ತಾರೊ ಮುತ್ತ ರಣರಂಗಭೀಮ ॥ ಶ್ರೀಕೃಷ್ಣ ಮೊಗವ ತೋರಯ್ಯ । ನೀಲ ಮೇಘಶ್ಯಾಮ । ಸುರಸಾರ್ವಭೌಮ ॥ ೧ ॥ ಇಂದೆನ್ನ ಸೌಭಾಗ್ಯದಾನಂದ । ಬಾರೊ ಗೋವಿಂದ । ಚಂದದಿಂದಪ್ಪುವೆನು ನೋಡೆಂದ ॥ ಬ್ರಹ್ಮಾದಿವಂದ್ಯ । ಎಂದೆಂದಿಗುಯೆನ್ನೊಡನಿರು ಕಂದ । ಬಾರೊ ಮುಕುಂದ ॥ ೨ ॥ ಅತ್ತಿತ್ತ ಹೋಗದಿರು ರಂಗಯ್ಯ । ಮುತ್ತ ತಾರಯ್ಯ । ಎತ್ತಿಕೊಂಬೆನಿತ್ತ ಬಾರಯ್ಯ । ಯಾದವರಾಯ । ಒತ್ತಿನನುಜ ಬಲರಾಮಯ್ಯ । ಗೋವಿಂದರಾಯ ॥ ೩ ॥ ಕಷ್ಟಬಟ್ಟೆವು ಕೇಳೊ ರಂಗ । ನೋಡೆಮ್ಮ ಅಂಗ । ದುಷ್ಟನೆಸಗಿದ ಮಾನ ಭಂಗ ॥ ನೀನಿಂದು ಕಳೆದು । ಇಷ್ಟ ಸಲಿಸಿದೆ ಮೋಹನಾಂಗ । ದಯದಿ ಕೃಪಾಂಗ ॥ ೪ ॥ ಎನುತ ದೇವಕಿಯು ಕೃಷ್ಣನ । ಬಾಯೊಳು ತನ್ನ । ಘನದ ಮೊಲೆಯುಡುತಲಿಯಾತನ ॥ ನೆತ್ತಿ ವಾಸನಿಸೆ । ಅನಿಮಿಷರ್ ಶಿರದ ಮೇಲೆ ಹೂವಿನ । ಮಳೆ ಸುರಿಸಿದರಾಗ ॥ ೫ ॥

ರಾಗ ಸಾಂಗತ್ಯ ರೂಪಕತಾಳ

ಈ ತೆರದಲಿ ಮುದ್ದಾಡುತಲಿರಲಾಗ ಶ್ರೀ । ಪತಿಯುಗ್ರಸೇನನಿಗೆ ॥ ತಾ ತಡೆಯದೆ ಎರಗುತಲೆಂದ ಮಥುರೆಯ । ನಾಥನಾಗೆಂದು ನೇಮಿಸಿದ ॥ ॥ ೧ ॥ ಹರಿಯನಪ್ಪುತಲುಗ್ರಸೇನ ಪೇಳಿದ ಮುನ್ನ । ಹಿರಿಯ ಯಯಾತಿ ಯೆಂಬವನು ॥ ಮೆರೆವ ವಿಷ್ಟರವನೇರದಿರೆಂದು ಶಪಿಸಿದ । ಧರೆಯ ನಾನೆಂತು ಆಳುವೆನು ॥ ೨ ॥ ಎನಲು ಶ್ರೀಕೃಷ್ಣ ಪೇಳಿದನುಗ್ರಸೇನಗೆ । ಮನದಿ ಚಿಂತಿ ಸದೆ ನೀನರಸ ॥ ಘನ ಪಟ್ಟ ವರಿಸು ನಾನಿರುವೆ ನಿನ್ನೋಳಗೇನ । ನನು ಮಾನಿಸದೆಯೇರಾಸನವ ॥ ೩ ॥

ಭಾಮಿನಿ

ಆ ಯಯಾತಿಯ ಶಾಪ ಕುಳ್ಳಿರ । ಲೀಯದಿನ್ನೆಗ ನಮ್ಮ ಯಾದವ । ರಾಮನನು ರಾಜಾಸನಾಗ್ರದಲಿನ್ನು ತಾನೆಂಬ ॥ ಜೀಯ ಭೃತ್ಯನಿರಲ್ಕೆ ನಿನಗ । ನ್ಯಾಯವಲ್ಲೆಂಜದಿರು ನಿರ್ಜರ । ರಾಯರೆರಗುವರುಳಿದ ರಾಯರ ಮಾತದೇಕೆಂದ ॥ ೧ ॥

ವಾರ್ಧಿಕ

ಅರುಹಿ ಧೈರ್ಯವನು ಮುರಹರನವಗೆ ನವರತ್ನ । ಭರಿತವಾಗಿರುವ ಸಿಂಹಾಸನವನಡರಿಸುತ । ಪುರದ ಪ್ರಜೆ ಪರಿವಾರ ಮಂತ್ರಿಜನರನ್ನು ತಾ ಬರಿಸಿ ಶ್ರೀಹರಿಯು ಮುದದಿ ॥ ಮೆರೆವ ಪೀತಾಂಬರದ ಸೆರಗ ಸೊಂಟಕೆ ಸುತ್ತಿ । ನರರಂತೆ ಓಲಯಿಸುತಿರುತ ಕೈಗಾಣಿಕೆಯ । ತರಿಶರಿಸಿ ತೋರಿಸುತ ಅರಸಗಾರತಿ ಬೆಳಗಲರುಹಿದನು ನಾರಿಜನಕೆ ॥ ೧ ॥

ರಾಗ ಧವಳಾರ ತ್ರಿವುಡೆತಾಳ

ಸುದತಿಯರೆಲ್ಲ ಕೂಡುತಲಿ । ಮಧುಸೂದನನ ನೇಮದಲಿ । ವಿಧವಿಧ ರತ್ನದ ಸರಗಳನಿಡುತ । ಪದಕದೆಡೆಯ ಕುಚ ಹರಿಗೆ ತೋರಿಸುತ ॥ ಮುದದಿ ಬರುತ ಮಧುರೆಯನಾಳುವ ಮಹಾ । ಚದುರಗಾರತಿಯ ಬೆಳಗಿರೆ ॥ ಶೋಭಾನೆ ॥ ೧ ॥ ಮೆರೆವ ಜವ್ವನದ ನಾರಿಯರು ಶ್ರೀ । ವರನು ಪಾಲಿಸುವನೆಂದವರು । ತ್ವರಿತದೊಳೊಬ್ಬರೊಬ್ಬರ ದೂಡುತಲಿ । ಭರದಿ ಬಂದರು ಆರತಿಯ ನೆವದಲಿ ॥ ಹರಿಯ ನೋಡುತ ಮರುಳಾಗಿ ತಾವು ಮಧುರೆಯ । ಅರಸಗಾರತಿಯ ಬೆಳಗಿರೆ ॥ ಶೋಭಾನೆ ॥ ೨ ॥ ಲಜ್ಜೆ ನಾಚಿಕೆಯನ್ನು ತೊರೆದು । ಸಜ್ಜನಾಭರಣದಿ ಮೆರೆದು । ಕಜ್ಜಳ ಕಣ್ಣಿಗಿಡುತ ಬಹುಬೇಗ । ತಜ್ಜಣರೆನುತ ಹೆಜ್ಜೆಯನಿಡುತಾಗ ॥ ಅಜ್ಜನು ನಿಮಗೆನುತುಗ್ರಸೇನನಿಗೆ ಮಹಾ । ವಜ್ರದಾರತಿಯ ಬೆಳಗಿರೆ ॥ ಶೋಭಾನೆ ॥ ೩ ॥

ವಾರ್ಧಿಕ

ಅರಸ ಕೇಳ್ ಹರಿಯು ಕರುಣದಿ ಮಧುರೆಯೊಳಗಿರುವ । ಮೆರೆದು ಮುಪ್ಪಡರಿ ಚರ್ಮವು ಜೋಲುವರು ಎಳೆಯ । ಹರಿಯದಂತವರಾಗೆ ಸರಸ ಸೌಭಾಗ್ಯದೊಳಗಿರಲನಿತರೊಳಗೆ ಹರಿಯು ॥ ಕರೆದನಾ ನಂದಗೋಪಗೆ ಒರೆದು ಗೋಕುಲಕೆ । ತೆರಳೆನಲು ನಿನ್ನ ನಾ ತೊರೆದು ಇರೆನೆಂದು ಬಹು । ಮರುಗಿ ದುಃಖಿಸಲು ಮುರಹರನು ತಾ ಸಂತವಿಸಿ ಮರಳಿಸಿದನವನ ಪುರಕೆ॥೧॥

ಹರಿಕಥಾಮೃತವ ಶುಕಯೋಗಿಯು ಪರೀಕ್ಷಿತಂ । ಗೊರೆದಂದದೀ ಕಥೆಯು ನಾನೊರೆಯಲಸದಳಂ । ತರಳ ನಾ ತಿಳಿದನಿತ ಪೇಳ್ದೆನಿದರೊಳಗನಂತಾನಂತ ದೋಷವಿರಲು ॥ ಕರುಣದಿಂ ಕ್ಷಮಿಸಿ ಸಾಮ್ರಾಜ್ಯ ಸೌಭಾಗ್ಯ ಸಂ । ಪದ ಮಾಯುರಾರೋಗ್ಯಮೈಶ್ವರ್ಯಮಿತ್ತೆನಗೆ । ಪೊರೆಯೊ ವಳಲಂಕೆ ಶ್ರೀಗುರು ವೆಂಕಟನೆ ರಮಾರಮಣನೆನ್ನನು ಪಾಲಿಸು ॥ ೨ ॥

ವಚನ

ಈ ತೆರದೊಳು ಸೌಭಾಗ್ಯವನೀವ ಲಕ್ಷ್ಮೀಪತಿಯಂ ನೆನೆನೆನೆದು ದೇವಾಂಗನೆಯರು ಸುಸ್ವರದಿ ಹರಿಗೆ ಮಂಗಳಾರತಿಯೆತ್ತಿ ಪಾಡಿದರದೆಂತೆನೆ–

ಮಂಗಳ

ರಾಗ ಧವಳಾರ ಆದಿತಾಳ

ಜಯ ಮಂಗಳವೆನ್ನಿ ಶ್ರೀಮಾಧವಗೆ ॥ ಗೋವಿಂದ ಹರಿಗೆ । ಜಯ ಜಯ ದಯಾಸಾಗರ ಚಿನ್ಮಯಗೆ । ವ್ಮಯ ತಾಪತ್ರಯ ಭಯಪರಿಹರಗೆ ॥ ಜಯ ಮಂಗಳವೆನ್ನಿ ಶ್ರೀಮಾಧವಗೆ ॥ ಪ ॥ ಸಿಂಧುಶಯನ ಸರ್ವೋತ್ತಮಗೆ । ವಿಧಿಭವರೊಂದಾಗಿ । ವೃಂದಾರಕರರೆಲ್ಲರ ನೆರಹಿಸಿ ಮನ । ನೊಂದುಕೊಳುತ ಕ್ಷೀರಾಂಬುಧಿಗೆ । ಬಂದರಿಕೆಯ ಗೆಯ್ಯಲಾಗ ಗೋವಿಂದ ಘಳಿಗೆ । ನಂದ ಗೋಕುಲದೊಳಾನಂದದೊಳುದಿಸುತ । ನಂದಕುವರನೆಂದೆನಿಸಿದಗೆ ॥ ಅಂದು ಪೂತನಿಯನು ಕೊಂದು ಶಕಟನ ಕೆಡೆ । ವಂದದಿ ಚರಣಗಳಿಂದೊದೆವುತ್ತಹಿ । ಯಂದದಿ ಕಪಟದಿ ಬಂದ ಅಘಾಸುರ । ನಂದಗೆಡಿಸಿ ಬೇರೊಂದಾಕೃತಿಯೊಳ । ಯ್ತಂದ ವಾತಾಸುರನೆಂದಿರುವನ ಕಟಿ । ಸಂದ ಕಳಚಿದ ಮುಕುಂದ । ಸುಂದರಾಂಗ ಮೂರುತಿಗೆ ॥ ಜಯ ಮಂಗಳವೆನ್ನಿ ಶ್ರೀಮಾಧವಗೆ ॥ ೧ ॥ ಸುಳ್ಳಿಗೆ ಮಣ್ಣ ಮೆದ್ದು ನಗುತ । ಬಾಯಿ ಕಳೆದಾಡುತ । ಘಲ್ಲಿಸಿ ಬ್ರಹ್ಮಾಂಡವನು ಯಶೋದೆಗೆ । ಎಲ್ಲವದರೊಳು ತೋರಿಸುತ । ಬಲ್ಲಿದ ಬಕನ ಉದರವ ಹೊಗುತ । ಸಿಗಿದಾಕ್ಷಣ ಪೊಡರುತ । ಗೊಲ್ಲಹುಡುಗರೊಳು ಕಲ್ಲಿಕೊಳುಣುತಲಿ । ನಲ್ಲೆ ಗೋಪಿಯರನು ಮೋಹಿಸುತ ॥ ಕೊಲ್ಲುತ ಮಧುರೆಯೊಳಲ್ಲಿ ರಜಕನನು । ಬಿಲ್ಲ ಮುರಿದು ಮತ್ತಲ್ಲಿ ಗಜೇಂದ್ರನ । ಹಲ್ಲ ಕಳಚಿ ಮಹಮಲ್ಲರ ರಣದಲಿ । ಚೆಲ್ಲಿ ಬಡಿದು ಸುರದಲ್ಲಣ ಕಂಸನ । ಹಲ್ಲ ಕಳಚಿ ಪುರಮೊಲ್ಲಭನುಗ್ರಸೇನಲ್ಲಿಟ್ಟಹ ಶ್ರೀನಲ್ಲ । ಬಿಲ್ಲ । ನಮ್ಮೆಲ್ಲರ ಪೊರೆವವಗೆ ॥ ಜಯ ಮಂಗಳವೆನ್ನಿ ಶ್ರೀಮಾಧವಗೆ ॥ ೨ ॥ ಶರಧಿಯೊಳಾಡಿ ಮಂದರ ಕಡೆದು ।

ಹಿರಣ್ಯಾಕ್ಷನ ಬಡಿದು । ತರಳಗೊಲಿದು ಚರಣಗಳಿಳಿವುತ ಮಹಿ । ಪರಶು ವಿಡಿದು ಕಪಿಗಳ ಬೆರೆದು । ತುರುವಿಂಡೆಬ್ಬುತ ಸತಿಯರ ನೆರೆದು । ತುರಗಡ ರುತ ನಲಿದು ॥ ವರವಳಲಂಕೆಯೊಳಿರುವ ಶ್ರೀವೇಂಕಟೇಶ್ವರನೆನುಗವ್ಯುತ । ಸುರಿಸುರಿದು ಪೊರೆವುತಜಗೆ ಶ್ರುತಿ ಕರೆದೀವುತ । ಗಿರಿ ಧರಿಸಿ ಪಾದದಿ ನೆಲ ಕೊರೆದು ಖಳನಸಿ । ಯರೆದು ನಯನವೊಂದಿರಿದು ಜನಪರನು । ತರಿದು ಕೋಡಗರೊಳಸರಿದು ಮಾವನ ಗೋಣ । ಮುರಿದು ವಸನವನ್ನು । ತೊರೆದು ರಾವುತನಾಗಿ ಮೆರೆದು ಕರೆದು ದಯ । ವೆರೆದು ಪೊರೆವ ಶ್ರೀರಮಾರಮಣ ನಿಗೆ ॥ ಜಯ ಮಂಗಳವೆನ್ನಿ ಶ್ರೀಮಾಧವಗೆ ॥ ೩ ॥

ಎರಡನೆಯ ಸಂಧಿ ಮುಗಿದುದು

ಯಕ್ಷಗಾನ ಬಿಲ್ಲಹಬ್ಬ ಅಥವಾ ಕಂಸವಧೆ ಸಂಪೂರ್ಣ

॥ ಶ್ರೀಕೃಷ್ಣಾರ್ಪಣಮಸ್ತು ॥

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು.
ಕಾ. ಶಕ. ೧೮೭೩. 2,000-12-1950

ಭಾಗವತದೊಳಗಣ ಯಕ್ಷಗಾನ ಪ್ರಸಂಗಗಳು

ಸಮುದ್ರಮಥನ	0	5	0
ವೃತ್ರಾಸುರಕಾಳಗ	0	6	0
ಗಿರಿಜಾಕಲ್ಯಾಣ	0	5	0
ಹಿರಣ್ಯಾಕ್ಷವಧೆ	0	4	0
ಪ್ರಹ್ಲಾದಚರಿತ್ರೆ	0	5	0
ರತ್ನಾವತೀಕಲ್ಯಾಣ (ದೃಢವರ್ಮಕಾಳಗ)	0	5	0
ಅಂಬರೀಷಚರಿತ್ರೆ	0	2	0
ರುಕ್ಮಾಂಗದಚರಿತ್ರೆ	0	5	0
ಜಲಂಧರನ ಕಾಳಗ	0	5	0
ಶ್ರೀಕೃಷ್ಣಬಾಲಲೀಲೆ	0	5	0
ರೇವತೀಕಲ್ಯಾಣ	0	8	0
ಯಾದವಾಭ್ಯುದಯ	0	6	0
ಚಂದ್ರಾವಳೀಪ್ರಸಂಗ	0	6	0
ರುಕ್ಮಿಣೀಸ್ವಯಂವರ	0	5	0
ರುಕ್ಮವತೀಕಲ್ಯಾಣ (ಪಾರಿಜಾತಾಪಹಾರ)	0	6	0
ಪಾರಿಜಾತಪ್ರಸಂಗ (ನರಕಾಸುರವಧೆ)	0	5	0
ಶ್ರೀಕೃಷ್ಣವಿವಾಹ	0	5	0
ರತಿಕಲ್ಯಾಣ	0	4	0
ಶಂಬರಾಸುರಕಾಳಗ	0	6	0
ಕನಕಾಂಗಿಕಲ್ಯಾಣ	0	6	0
ಲಕ್ಷಣಾಕಲ್ಯಾಣ	0	5	0
ಬಾಣಾಸುರಕಾಳಗ (ಉಷಾಪರಿಣಯ)	0	5	0
ಶ್ರೀಕೃಷ್ಣದಿನಾಶ್ವಮೇಧ	0	6	0
ದೇವೀಮಹಾತ್ಮೆ ಪ್ರಸಂಗ	0	8	0

ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಉಡುಪಿ